ಅಖಿಲ ಕರ್ನಾಟಕ


# ಶಿಕ್ಷಕ ಸಮಾಚಾರ

ಸೆಪ್ಟೆಂಬರ್ 2016 ಮಾಸ ಪತ್ರಿಕೆ

ಸಂಪುಟ : 38
ಸಂಚಿಕೆ : 12
ಪುಟ : 12
ಬೆಲೆ : ₹ 10/–




ಲಾಲ್‌ಬಹಾದ್ದೂರ್ ಶಾಸ್ತ್ರಿ





ಎಂ.ಆರ್.ಶ್ರೀ



ಕೇಂದ್ರ ಮಾನವ ಸಂಪನ್ಮೂಲ ಸಚಿವರಿಗೆ
ಶಿಕ್ಷಕ ಸಂಘದಿಂದ ಮನವಿ



ರಾಜ್ಯ ಶಿಕ್ಷಣ ಸಚಿವರಿಗೆ ಸಂಘದ ಮನವಿ

A Journal of Karnataka State Secondary Teachers' Association

# ಸಂಪಾದಕೀಯ

ಸೆಪ್ಟೆಂಬರ್ 5 ರಂದು ದೇಶಾದ್ಯಂತ ಶಿಕ್ಷಕರ ದಿನಾಚರಣೆಯನ್ನು ಆಚರಿಸಿದ್ದೇವೆ. ಅಕ್ಟೋಬರ್ 5 ರಂದು ವಿಶ್ವ ಶಿಕ್ಷಕರ ದಿನಾಚರಣೆ. ಈ ಸಂದರ್ಭದಲ್ಲಿ ಸರ್ಕಾರಗಳು ಕೆಲವು ಶಿಕ್ಷಕರಿಗೆ ಪ್ರಶಸ್ತಿಯನ್ನು ನೀಡುತ್ತದೆ. ಸಮಾರಂಭದಲ್ಲಿ ಸನ್ಮಾನಿಸುತ್ತದೆ. ಸ್ವಲ್ಪ ಮೊತ್ತದ ಹಣವನ್ನೂ ನೀಡುತ್ತದೆ. ಸನ್ಮಾನಿತರಾದ ಶಿಕ್ಷಕರಿಗೆ ಇದು ಸಹಜವಾಗಿಯೇ ಸಂತೋಷ ನೀಡುತ್ತದೆ. ಶಿಕ್ಷಕ ದಿನಾಚರಣೆಯ ಅಂಗವಾಗಿ ಸಾಮಾನ್ಯವಾಗಿ ಎಲ್ಲ ಶಾಲೆಗಳೂ ಸಮಾರಂಭವನ್ನು ಏರ್ಪಡಿಸಿ ಶಿಕ್ಷಕರನ್ನು ಹೊಗಳಿ, ಬುದ್ಧಿ ಮಾತು ಹೇಳಿ, ನೆನಪಿನ ಕಾಣಿಕೆಯನ್ನು ಕೊಟ್ಟು ಗೌರವಿಸುತ್ತದೆ. ಇದೂ ಕೂಡ ಶಿಕ್ಷಕರಿಗೆ ಸ್ವಲ್ಪ ಸಮಯ ಖುಷಿ ಕೊಡುತ್ತದೆ. ಇನ್ನು ಕೆಲವೆಡೆ ಶಾಲೆಗಳಲ್ಲಿ ವಿದ್ಯಾರ್ಥಿಗಳು ತಮ್ಮ ಶಿಕ್ಷಕರಿಗೆ ಕಾಣಿಕೆಗಳನ್ನು ನೀಡಿ ಶುಭ ಹಾರೈಸುತ್ತಾರೆ. ಬೇರೆಯವರು ನೀಡಿದ ಕಾಣಿಕೆಗಳಿಗಿಂತ ವಿದ್ಯಾರ್ಥಿಗಳು ನೀಡಿದ ಕಾಣಿಕೆ, ಹಾರೈಕೆ ಹೆಚ್ಚು ಆತ್ಮೀಯವೆನಿಸುತ್ತದೆ, ಹೆಚ್ಚು ಮುದ ನೀಡುತ್ತದೆ. ವಿದ್ಯಾರ್ಥಿಗಳು ಹೆಚ್ಚು ಅಂಕಗಳೊಂದಿಗೆ ತೇರ್ಗಡೆಯಾದರೆ ತಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ ಸಿಕ್ಕಿದಂತೆ ಎಂಬ ಭಾವನೆ ಶಿಕ್ಷಕರಲ್ಲಿ ಆಗ ಮೂಡುತ್ತದೆ. ತಮ್ಮ ವಿದ್ಯಾರ್ಥಿಗಳು ಶಾಲೆಯನ್ನು ಬಿಟ್ಟ ನಂತರ ಸಾಧಾರಣವಾಗಿ ಶಿಕ್ಷಕರ ಸಂಪರ್ಕದಿಂದ ಸಹಜವಾಗಿಯೇ ದೂರವಾಗುತ್ತಾರೆ. ವಿದ್ಯಾರ್ಥಿಗಳೂ ಪರಸ್ಪರ ಸಂಪರ್ಕದಲ್ಲಿರುವುದು ವಿರಳ. ಆ ವಿದ್ಯಾರ್ಥಿಗಳು ಪರಸ್ಪರ ಸೇರಿದಾಗ ತಮ್ಮ ಶಾಲೆ, ಶಿಕ್ಷಕರನ್ನು ನೆನಪಿಸಿಕೊಂಡು ಅವರನ್ನು ಭೇಟಿ ಮಾಡಿ ತಮ್ಮ ಪ್ರೀತಿ, ವಿಶ್ವಾಸ, ಗೌರವಗಳನ್ನು ವ್ಯಕ್ತಪಡಿಸಿದರೆ ಆ ಶಿಕ್ಷಕರಿಗೆ ಬೇರೆ ಎಲ್ಲಾ ಸನ್ಮಾನ, ಗೌರವ, ಪ್ರಶಸ್ತಿಗಳಿಗಿಂತ ಶ್ರೇಷ್ಠವಾದುದು, ಮಹತ್ವದ್ದು ಎನಿಸುತ್ತದೆ. ಶಿಕ್ಷಕರಾಗಿ ಧನ್ಯತೆಯ, ಸಾರ್ಥಕತೆಯ ಭಾವನೆ ಮೂಡುವುದಲ್ಲವೇ?. ಅಂತಹ ಅನುಭವ ಈ ವರ್ಷ ಸೆಪ್ಟೆಂಬರ್ 5ರಂದು ನಮ್ಮ ಶಾಲೆಯ ಇಬ್ಬರು ಶಿಕ್ಷಕರಿಗೆ ಲಭಿಸಿದೆ.

30 ವರ್ಷಗಳ ಹಿಂದೆ ಶಾಲೆಯಲ್ಲಿ ವ್ಯಾಸಂಗ ಮಾಡಿದ ಸುಮಾರು 12 ವಿದ್ಯಾರ್ಥಿಗಳು ವಿದೇಶದಿಂದ ಬಂದ ಗೆಳೆಯನೊಂದಿಗೆ ಕಾಲ ಕಳೆಯಲು ಒಂದೆಡೆ ಸೇರಿದರು. ಸಹಜವಾಗಿ ಶಾಲೆಯಲ್ಲಿ ಕಳೆದ ದಿನಗಳ ಸ್ಮರಣೆ. ಇಂದು ಶಿಕ್ಷಕರ ದಿನ, ನಮ್ಮ ಮೇಷ್ಟ್ರ ಮನೆಗೆ ಏಕೆ ಹೋಗಬಾರದು ಎಂಬ ಸಲಹೆ ಒಬ್ಬನಿಂದ. ಎಲ್ಲರೂ ಖುಷಿಯಿಂದ ಕಾರ್ಯಪ್ರವೃತ್ತರಾದರು. ಶಿಕ್ಷಕರಿಗೆ ತಿಳಿಸದೆ, ಗುಟ್ಟಾಗಿ ಅವರ ಮನೆಗೆ ಹೋದರು. ಪ್ರೀತಿಯಿಂದ ಮಾತನಾಡಿದರು, ಗೌರವಿಸಿದರು, ಖುಷಿ ಹಂಚಿಕೊಂಡರು. ಶಿಕ್ಷಕರು ಮೂಕವಿಸ್ಮಿತರಾಗಿ ಎಲ್ಲವನ್ನೂ ಸಂತೃಪ್ತಿಯ ಭಾವನೆಯಿಂದ ಅನುಭವಿಸಿದರು, ಧನ್ಯತೆಯ ಭಾವವನ್ನು ತಳೆದರು. ಇಂತಹ ಸಾರ್ಥಕತೆಯ ಕ್ಷಣಗಳು ಎಲ್ಲಾ ಶಿಕ್ಷಕರಿಗೂ ಬರಲಿ ಎಂದು ಆಶಿಸೋಣ.

ಮನುಷ್ಯ ಜೀವಿಸಲು ಹೃದಯವೇ ಅತಿಮುಖ್ಯ. ಹೃದಯದ ಕೆಲಸ ಸರಿಯಾಗಿ ನಡೆಯಲು, ಹೃದಯದ ತೊಂದರೆ ಎದುರಾಗದಂತೆ ಎಚ್ಚರ ವಹಿಸಬೇಕಾಗುತ್ತದೆ. ಅದರಲ್ಲೂ ಶಿಕ್ಷಕರು ಹೆಚ್ಚು ಜಾಗೃತರಾಗಿರಬೇಕು. ಹೃದಯವನ್ನು ಹೇಗೆ ಕಾಪಾಡಿಕೊಳ್ಳಬೇಕು, ನಾವು ತೆಗೆದುಕೊಳ್ಳಬೇಕಾದ ಎಚ್ಚರಿಕೆಯ ಕ್ರಮಗಳೇನು ಎಂಬುದನ್ನು ನೆನಪಿಸಲು ಸೆಪ್ಟೆಂಬರ್ 29ನ್ನು "ವಿಶ್ವ ಹೃದಯ ದಿನ"ವನ್ನಾಗಿ ಆಚರಿಸಲಾಗುತ್ತದೆ. ಈ ಸಂದರ್ಭದಲ್ಲಿ ಹೃದಯ ತಜ್ಞರು ನೀಡುವ ಸಲಹೆಗಳನ್ನು ಪಾಲಿಸಿ, ಆರೋಗ್ಯವಂತರಾಗಿ, ಉತ್ತಮ ಹೃದಯವಂತರಾಗಿ ಬಾಳೋಣ. ಮನುಷ್ಯನಿಗೆ ಇನ್ನೂ ಒಂದು ಹೃದಯವಿದೆ. ಅದು ಅವನ ಭಾವನೆಗಳಿಗೆ ಸಂಬಂಧಿಸಿದ್ದು. ರಾಗ, ದ್ವೇಷ, ಅಸೂಯೆ . . .ಮುಂತಾದ ಕೆಟ್ಟ ಭಾವನೆಗಳನ್ನು ಹೃದಯದಿಂದ ದೂರಮಾಡಿ ಪ್ರೀತಿ, ವಿಶ್ವಾಸ, ನಂಬಿಕೆ . . . ಮುಂತಾದ ಮಾನವೀಯ ಮೌಲ್ಯಗಳನ್ನು ರೂಢಿಸಿಕೊಂಡು, ಹೃದಯ ಶ್ರೀಮಂತಿಕೆಯನ್ನು ಬೆಳೆಸಿಕೊಂಡು ವಿಶಾಲ ಹೃದಯಿಗಳಾಗಿ, ಉತ್ತಮ ಹೃದಯ, ಹೃದಯವಂತಿಕೆಯನ್ನು ಕಾಪಾಡಿಕೊಳ್ಳೋಣ.

ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಸಾಹಿತ್ಯೋಪಾಸಕರು ಅನೇಕರು. ಕನ್ನಡದಲ್ಲಿ 'ಚುಟುಕ'ಗಳನ್ನು ರಚಿಸಿ 'ಚುಟುಕಬ್ರಹ್ಮ' ಎಂದೇ ಖ್ಯಾತರಾದವರು ದಿನಕರ ದೇಸಾಯಿಯವರು. ಅಂತೆಯೇ ನಾಟಕರಂಗದಲ್ಲಿ ಶಿಖರಪ್ರಾಯರು ಶ್ರೀರಂಗರು. ನವ್ಯ ಸಾಹಿತಿಗಳಾಗಿ, ಕಥೆಗಾರರಾಗಿ ಪ್ರಖ್ಯಾತರು ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು. ಕನ್ನಡದಲ್ಲಿ ರಾಷ್ಟ್ರಕವಿ ಪುರಸ್ಕೃತರು ಮೂವರು. ಕನ್ನಡದ ಮೊದಲ ರಾಷ್ಟ್ರಕವಿ ಎಂ. ಗೋವಿಂದ ಪೈ ಅವರು. ವಿದ್ವಾಂಸರಾಗಿ ತೀ. ನಂ. ಶ್ರೀ. ಯವರ ಕೊಡುಗೆ ಅಮೂಲ್ಯವಾದುದು. ಕಾದಂಬರಿಕಾರ್ತಿಯಾಗಿ ತ್ರಿವೇಣಿಯವರ ಕೊಡುಗೆ ಅಪಾರ. ಸೆಪ್ಟೆಂಬರ್‌ನಲ್ಲಿ ಅನೇಕರ ಜಯಂತಿ ಹಾಗೂ ಪುಣ್ಯ ಸ್ಮೃತಿ. ಈ ಎಲ್ಲಾ ಸಾಹಿತ್ಯೋಪಾಸಕರು ಹಾಗೂ ಅವರ ಸಾಧನೆಗಳನ್ನು ಸ್ಮರಿಸೋಣ.

ಸಂಪಾದಕರು

## ಸೂಕ್ತಿ

ಸ್ಥಾನಭ್ರಂಶೇಽಪಿ ಶೋಭಂತೇ
ಮಹಾತ್ಮನೋ ಗುಣೋಜ್ಜ್ವಲಾಃ ।
ದಂತಿದಂತೋ ವ್ಯಾಘ್ರಚರ್ಮ
ಚಮರೀ ರೋಮ ಚೇದೃಶಮ್ ॥

ಸದ್ಗುಣಿಗಳಾದ ಮಹಾತ್ಮರು ಪರಸ್ಥಳಕ್ಕೆ ಹೋದರೂ ತಮ್ಮ ಸದ್ವರ್ತನೆಯಿಂದ ಅಲ್ಲಿಯೂ ಶೋಭಿಸುತ್ತಾರೆ. ಹೇಗೆ ಆನೆಗಳ ದಂತಗಳು, ಹುಲಿಯ ಚರ್ಮ, ಚಮರೀಮೃಗದ ಕೂದಲು ಇವೆಲ್ಲ ಜಗತ್ತಿನ ಯಾವುದೇ ಭಾಗದಲ್ಲಿದ್ದರೂ ಮೌಲ್ಯಯುತವಾಗಿರುತ್ತದೆಯೋ ಹಾಗೆ ಸದ್ಗುಣಿಗಳಿಗೆ ಎಲ್ಲೆಡೆ ಮಾನ್ಯತೆ ಇದೆ. ಶ್ರೀರಾಮ, ಯುಧಿಷ್ಠಿರ ಮುಂತಾದವರು ವನವಾಸದಲ್ಲಿದ್ದರೂ ಖುಷಿ-ಮುನಿಗಳಿಂದ ಸದಾ ಸನ್ಮಾನಿತರಾಗಿದ್ದರು.

- ದೃಷ್ಟಾಂತ ಶತಕ.

## ಪರಿವಿಡಿ


- ಮೌಲ್ಯಯುತ ಜೀವನವೂ ರಾಷ್ಟ್ರಸೇವೆಯ ಭಾಗ 3
- ಪ್ರಾಚೀನ ಕರ್ನಾಟಕದಲ್ಲಿ ಶಿಕ್ಷಣ 4
- ಹೃದಯ ಸಂಕ್ರಾಂತಿ 5
- ವೇದ ಗಣಿತ 6
- ಸಂಘದ ವಾರ್ತೆ 7
- ಪರೀಕ್ಷೆ 8
- ವೃತ್ತ 8
- ಧಾರವಾಡ ಕಾರ್ಯಕಾರಿಣಿ 10
- ಮಕ್ಕಳ ಮಂಟಪ 10
- ಹೆಜ್ಜೆ ಗುರುತು 11
- ಚಿತ್ರಸುದ್ದಿ 12



# ಮೌಲ್ಯಯುತ ಜೀವನವೂ ರಾಷ್ಟ್ರಸೇವೆಯ ಭಾಗ



ಭೀಮಸೇನ್ ಪುರೋಹಿತ್
B.E. MTech
ಇಂಜಿನಿಯರ್
ಬೆಂಗಳೂರು

'ರಾಷ್ಟ್ರನಿರ್ಮಾಣ, ದೇಶ ಕಟ್ಟುವುದು' ಇಂತಹ ಪದಗಳನ್ನು ಆಗಾಗ ಕೇಳುತ್ತಿರುತ್ತೇವೆ. ಆದರೆ, ಇದರ ಅರ್ಥವೇನು ? ದೊಡ್ಡ ಕಟ್ಟಡಗಳನ್ನು ಕಟ್ಟುವುದೇ, ದೇಶ ಕಟ್ಟುವುದೇ ? ಅಥವಾ ಉದ್ದ ರಸ್ತೆಗಳು, ವೈಭವದ ಮಹಲುಗಳು ಇವು ?? ಊಹೂ. ಇದೆಲ್ಲವೂ ದೇಶದ ಬಾಹ್ಯ ಸೌಂದರ್ಯವನ್ನು ಹೆಚ್ಚಿಸಬಹುದೇ ಹೊರತು, ಆಂತರಿಕವಾಗಿ ಗಟ್ಟಿಗೊಳಿಸುವುದಿಲ್ಲ.

ವಿಶ್ವೇಶ್ವರಯ್ಯನವರು ಹೇಳುವಂತೆ, ಒಂದು ಉತ್ತಮ ಸಮಾಜದ ನಿರ್ಮಾಣ ಎಂದರೆ, ಒಬ್ಬ ಉತ್ತಮ ವ್ಯಕ್ತಿಯ ನಿರ್ಮಾಣ. ಪ್ರತಿಯೊಬ್ಬ ವ್ಯಕ್ತಿಯ ಸದ್ಗುಣ ಚಾರಿತ್ರ್ಯದಿಂದಲೇ ಸದೃಢ ರಾಷ್ಟ್ರದ ಬೆಳವಣಿಗೆ ಸಾಧ್ಯ. ಅದಕ್ಕೆಂದೆ ನಮ್ಮ ಹಿರಿಯರು ತಮ್ಮ ಬದುಕನ್ನು ಆದರ್ಶಮಯವಾಗಿ ಜೀವಿಸಿ, ಮಾದರಿಯನ್ನಿಟ್ಟು ಹೋಗಿದ್ದಾರೆ. ಆ ಮೌಲ್ಯಗಳ ಅಳವಡಿಕೆಯೇ, ಅವರಿಗೆ ತೋರುವ ಗೌರವ ಮತ್ತು ನಾವು ಮಾಡಬಹುದಾದ ಕನಿಷ್ಠ ದೇಶಸೇವೆ.

● ಒಂದು ಕಡೆ, ಒಬ್ಬ ಹುಡುಗ ಗಾಂಧೀಜಿಯವರ ತುಂಡು ಪಂಚೆಯನ್ನು ನೋಡಿ ಕೇಳಿದ. 'ತಾತಾ, ಯಾಕೆ ನೀವು ಕುರ್ತಾ ಧರಿಸಬಾರದು ? ನಮ್ಮ ತಾಯಿ ಚೆನ್ನಾಗಿ ಬಟ್ಟೆ ಹೊಲೆಯುತ್ತಾರೆ'. ಅದಕ್ಕೆ ಗಾಂಧೀಜಿ ಹೇಳಿದರು, 'ಮಗು, ನಿಮ್ಮ ಅಮ್ಮ ಎಷ್ಟು ಬಟ್ಟೆ ಹೊಲೆಯಬಲ್ಲರು. ಏಕೆಂದರೆ ನನ್ನ ಸಂಸಾರ ತುಂಬಾ ದೊಡ್ಡದಿದೆ' ಎಂದು. ಆ ಬಾಲಕನೂ ಮರುನುಡಿದ, 'ನಿಮಗೆ ಎಷ್ಟು ಬೇಕೋ ಅಷ್ಟು ಹೊಲೆದು ಕೊಡುತ್ತಾರೆ, ಒಂದು, ಎರಡು, ಮೂರು ಎಷ್ಟು ಬೇಕೋ ಹೇಳಿ..'

ಗಾಂಧೀಜಿ, 'ನನ್ನ ಕುಟುಂಬದಲ್ಲಿ 40 ಕೋಟಿ ಸಹೋದರ–ಸಹೋದರಿಯರಿದ್ದಾರೆ, ಅಷ್ಟು ಜನ ಬಟ್ಟೆ ಇಲ್ಲದೆ ಇರುವಾಗ, ನಾನೊಬ್ಬನೇ ಹೇಗೆ ಕುರ್ತಾ ಧರಿಸಲಿ. ಹೊಲಿಸುವುದಾದರೆ, ಅವರೆಲ್ಲರಿಗೂ ಸಿಗಲಿ, ಆಮೇಲೆ ನಾನೂ ಧರಿಸುತ್ತೇನೆ' ಎಂದರಂತೆ. ಇಂಥಾ ಉದಾತ್ತ ಮನೋಭಾವ ಬಹಳ ಅಪರೂಪ. ಚೆನ್ನಾಗಿರುವುದೆಲ್ಲಾ ನಮಗಿರಲಿ ಎಂದು ಆಸೆ ಪಡುವವರೇ ಅಧಿಕ. ಆದರೆ, ನನ್ನ ಸುತ್ತಲಿನ ಜನರು ಮೊದಲು ಸುಖವಾಗಿರಲಿ ಎಂದು ಬಯಸುವುದೇ ಒಬ್ಬ ನಾಯಕನ ಮತ್ತು ಸಜ್ಜನನ ಲಕ್ಷಣ.


● ಗಾಂಧೀಜಿ, ಆಫ್ರಿಕಾದ ಜೊಹಾನ್ಸ್–ಬರ್ಗ್ ನಲ್ಲಿದ್ದಾಗ ಒಮ್ಮೆ, ಅವರ ಸ್ನೇಹಿತ ಪೊಲಾಕ್, ಗಾಂಧೀಜಿಯವರ ಮಗನಾದ ಮಣಿಲಾಲ್ ನಿಗೆ, ಆಫೀಸ್‌ನಿಂದ ಬರುವಾಗ ಒಂದು ಪುಸ್ತಕ ತರಲು ಹೇಳಿದ್ದರು. ಆದರೆ ಆ ಚಿಕ್ಕ ಬಾಲಕ ಮರೆತುಬಿಟ್ಟ. ಮನೆಗೆ ಬಂದ ಮೇಲೆ, ಪೊಲಾಕರು ಕೇಳಿದ ಮೇಲೆಯೇ ನೆನಪಾಗಿದ್ದು. ಅದಾಗಲೇ ಕತ್ತಲಾಗಿತ್ತು. ಏನು ಮಾಡಬೇಕೆಂದು ಯೋಚಿಸುತ್ತಿರುವಾಗಲೇ ಗಾಂಧೀಜಿಯವರು ನುಡಿದರು. 'ಮಣಿಲಾಲ್, ಅದು ನಿನಗೊಪ್ಪಿಸಿದ ಕೆಲಸವಲ್ಲವೆ, ಪುಸ್ತಕ ತೆಗೆದುಕೊಂಡು ಬಾ' ಎಂದು. ಕಸ್ತೂರ್ ಬಾ ಹೆದರಿ, ಕತ್ತಲಾಗಿದೆ, ನಾನೇ ತೊಗೊಂಡು ಬರುತ್ತೇನೆ ಎಂದರೂ, ಗಾಂಧೀಜಿಯವರು 'ಅದು ಮಣಿಲಾಲನ ಕೆಲಸ, ಅವನೇ ಮಾಡಲಿ' ಎಂದುಬಿಟ್ಟರು. ಕೊನೆಗೆ, ತಾಯಿಯು ನಾನು ಜೊತೆಗಾದರೂ ಹೊಗುತ್ತೇನೆ ಎಂದು ಹೇಳಿ, ಆ ಪುಸ್ತಕವನ್ನು ಇಬ್ಬರೂ ತಂದರು.

ಆ ಪುಸ್ತಕವನ್ನು ಮರುದಿನವೂ ತಂದುಕೊಡಬಹುದಿತ್ತು. ಆದರೆ, ನಾವು ಒಬ್ಬರಿಗೆ ಮಾತು ಕೊಟ್ಟಾಗ, ಅದನ್ನು ನಂಬಿ ಅವರು ಬೇರೆ ಕೆಲಸಗಳನ್ನು ಹಾಕಿಕೊಂಡಿರುತ್ತಾರೆ. ಆಗ, ನಮ್ಮ ಬೇಜವಾಬ್ದಾರಿಯಿಂದ ನಮ್ಮ ಮಾತನ್ನು ಮರೆತರೆ, ಅವರಿಗೆಷ್ಟು ತೊಂದರೆಯಾಗಬಹುದು !!

ಹೀಗಾಗಿಯೇ, ಕೊಟ್ಟ ಭಾಷೆಗೆ ತಪ್ಪಬಾರದೆಂಬ ನೀತಿಯನ್ನು, ಗಾಂಧೀಜಿ ಆ ಬಾಲಕನಿಗೆ ಕಲಿಸಿದರು.

● ಲಾಲ್ ಬಹುದ್ದೂರ್ ಶಾಸ್ತ್ರಿಗಳು ಪ್ರಧಾನಮಂತ್ರಿಯಾಗಿದ್ದ ಸಮಯ. ಅವರ ಸ್ನೇಹಿತರೊಬ್ಬರು ಒಮ್ಮೆ ಮನೆಗೆ ಬಂದು, ತಮ್ಮ ಕಡುಬಡತನವನ್ನು ನಿವೇದಿಸಿ, ಯಾವುದೋ ಅವಸರದ

ಪುಟ 9 ಕ್ಕೆ ➤



## ಶಿಕ್ಷಣ ಸೌರಭ ಮಾಲಿಕೆ

# ಪ್ರಾಚೀನ ಕರ್ನಾಟಕದಲ್ಲಿ ಶಿಕ್ಷಣ

**ವಿ. ರಾಜ**
**ರಾಜ್ಯ ಶೈಕ್ಷಣಿಕ ಪ್ರಕೋಷ್ಠ ಪ್ರಮುಖರು**
**ಕರ್ನಾಟಕ ರಾಜ್ಯ**
**ಮಾಧ್ಯಮಿಕ ಶಿಕ್ಷಕ ಸಂಘ**



ಕರ್ನಾಟಕದ ಶಿಕ್ಷಣ ಹಾಗೂ ಭಾರತದ ಶಿಕ್ಷಣಗಳೆರಡೂ ಒಂದೇ ದಿಕ್ಕಿನಲ್ಲಿ ಚಲಿಸುತ್ತಿದ್ದುದು ಕಂಡು ಬಂದಿದೆ. ಕರ್ನಾಟಕ ಕೈಗೊಂಡ ವಯಸ್ಕರ ಶಿಕ್ಷಣ ಕಾರ್ಯಕ್ರಮ ಇಡೀ ದೇಶಕ್ಕೆ ಮಾದರಿಯಾಗಿದೆ. ರಾಷ್ಟ್ರೀಯ ಶಿಕ್ಷಣ ಅಥವಾ ದೇಶೀಯ ಶಿಕ್ಷಣ ಕರ್ನಾಟಕ ಮತ್ತು ಭಾರತದ ವಿವಿಧ ಭಾಗಗಳಲ್ಲೂ ಬೆಳಕಿಗೆ ಒಂದು ಸ್ವಾತಂತ್ರ್ಯ ಪಡೆಯಲು ಸ್ಫೂರ್ತಿ ನೀಡಿತು. ಕರ್ನಾಟಕದ ಶಿಕ್ಷಣ ಇತಿಹಾಸ, ಏಕೀಕೃತ ಕರ್ನಾಟಕವಾಗುವ ಮೊದಲಿನ ಕೊಡಗು, ಮುಂಬೈ ಕರ್ನಾಟಕ, ಹೈದರಾಬಾದ್ ಕರ್ನಾಟಕ ಮತ್ತು ಮದ್ರಾಸ್ ಕರ್ನಾಟಕ, ಪ್ರಾಂತ್ಯಗಳ ಶೈಕ್ಷಣಿಕ ಪರಂಪರೆ, ಕರ್ನಾಟಕದಲ್ಲಿನ ಶೈಕ್ಷಣಿಕ ಆಡಳಿತ, ಕರ್ನಾಟಕ ಶಿಕ್ಷಣಕ್ಕೆ ಇತರರ ಕೊಡುಗೆ ಮುಂತಾದವುಗಳನ್ನು ಅರಿಯಲು ಪ್ರಾಚೀನ ಕರ್ನಾಟಕದ ಶಿಕ್ಷಣ ಪದ್ಧತಿಯನ್ನು ಅಧ್ಯಯನ ಮಾಡುವುದು ಅತ್ಯವಶ್ಯಕವಾಗಿದೆ.

ಕರ್ನಾಟಕದಲ್ಲಿ ಅಗ್ರಹಾರಗಳು, ಘಟಕಗಳು, ಬ್ರಹ್ಮಪುರಿಗಳು, ಮಠಗಳು ಹಾಗೂ ದೇವಾಲಯಗಳು ವಿದ್ಯಾಕೇಂದ್ರಗಳಾಗಿದ್ದವು. ಹಿಂದಿನಿಂದಲೂ ಈ ಸ್ಥಳಗಳಲ್ಲಿ ಶಿಕ್ಷಣ ಕೇಂದ್ರಗಳು ಉಚ್ಛ್ರಾಯ ಸ್ಥಿತಿಯಲ್ಲಿದ್ದವು. ಹಾಸನ ಜಿಲ್ಲೆಯ ಸರ್ವಜ್ಞಪುರ, ನಾಗರಬಂಡೆ, ಶಿವಮೊಗ್ಗ ಜಿಲ್ಲೆಯ ಕೆಲ್ಲಾಂಗ್ರೆಗಳಲ್ಲಿ ಪ್ರಸಿದ್ಧವಾದ ಅಗ್ರಹಾರಗಳು ಇದ್ದವೆಂದು ಕ್ರಿ.ಶ 1234ರ ಶಾಸನದಲ್ಲಿ ಉಲ್ಲೇಖವಾಗಿದೆ. ಅದೇ ಜಿಲ್ಲೆಯ ಕ್ರಿ.ಶ 1204 ರ ಶಾಸನವು ವ್ಯಾಸಂಗ, ಸಾಹಿತ್ಯ ಚಟುವಟಿಕೆಯ ವಿವರಗಳನ್ನು ನೀಡುತ್ತದೆ. ಅಲ್ಲಿನ ಜನರು ಗ್ರಾಮವನ್ನು ಉಪಾಧ್ಯಾಯರಿಗೆ ವಹಿಸಿ, ಅವರಿಗೆ ಸಕಲ ವ್ಯವಸ್ಥೆ ಮಾಡಿ, ವೇದ ಪಠನ, ಶಿಕ್ಷಣ ವ್ಯಾಸಂಗ ಉಳಿಯುವಂತೆ ನೋಡಿಕೊಳ್ಳುತ್ತಿದ್ದರು.

ಆಗಿನ ಕಾಲದಲ್ಲಿ ಘಟಿಕಾ ಅಥವಾ ಘಟಕಗಳು ವಿದ್ಯಾಕೇಂದ್ರಗಳಾಗಿದ್ದವು. ಗುರು– ಶಿಷ್ಯರಿಬ್ಬರೂ ಜ್ಞಾನಾರ್ಜನೆಗಾಗಿ ಶ್ರಮಿಸುತ್ತಿದ್ದರು. ದೇವಾಲಯಗಳನ್ನು ಶಿಕ್ಷಣೋದ್ದೇಶಗಳಿಗಾಗಿ ಬಳಸಿಕೊಳ್ಳುತ್ತಿದ್ದರು. ಅವುಗಳನ್ನು 'ಘಟಿಕಾಸ್ಥಾನ'ಗಳೆಂದು ಕರೆಯುತ್ತಿದ್ದರು. ಹೆಂಜಾರ ಪಟ್ಟಣದಲ್ಲಿ ದೊಡ್ಡ 'ಘಟಿಕಾಸ್ಥಾನ' ಇದ್ದುದಾಗಿ ತಿಳಿದುಬಂದಿದೆ.

ಬ್ರಹ್ಮಪುರಿ ಉಚ್ಚ ಶಿಕ್ಷಣದ ಸ್ಥಾನವಾಗಿತ್ತು. ದೇವಾಲಯಗಳು ಬ್ರಹ್ಮಪುರಿಯ ಸ್ಥಾನವನ್ನು ವಹಿಸಿದ್ದವು. ಕ್ರಿ.ಶ. 1158 ರ ಶಾಸನದ ಪ್ರಕಾರ ಶಿಕಾರಿಪುರ ತಾಲೂಕಿನ ತಾಲಗುಂದ ದೇವಾಲಯವು ಪ್ರಸಿದ್ಧ ಬ್ರಹ್ಮಪುರಿಯಾಗಿತ್ತು ಎಂದು ತಿಳಿದುಬಂದಿದೆ. ಬ್ರಹ್ಮಪುರಿಗಳು ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕೇಂದ್ರಗಳಾಗಿ ಪ್ರಖ್ಯಾತಿ ಹೊಂದಿದ್ದವು.

ಬ್ರಹ್ಮಪುರಿಗಳಲ್ಲಿ ಋಗ್ವೇದ, ಯಜುರ್ವೇದ, ಸಾಮವೇದ, ಪ್ರಭಾಕರ, ಮೀಮಾಂಸೆ, ವೇದಾಂತ, ಭಾಷಾಶಾಸ್ತ್ರ ಮತ್ತು ಕನ್ನಡದ ಬಗ್ಗೆ ವ್ಯಾಸಂಗ ನಡೆಯುತ್ತಿತ್ತು.

ಅಂದಿನ ಜೈನ ಹಾಗೂ ಬೌದ್ಧ ಮಠಗಳಲ್ಲಿ ಜಾತಿಭೇದ ವಿರಲಿಲ್ಲ. ವಿದ್ಯಾನ್ವೇಷಣೆಗಾಗಿ ಯಾರೇ ಬಂದರೂ ಅವರಿಗೆ ಅಲ್ಲಿ ಉಚ್ಚ ಶಿಕ್ಷಣ ದೊರೆಯುತ್ತಿತ್ತು. ಹೊಯ್ಸಳ ದೊರೆಗಳು, ಶ್ರೀಮಂತರು, ವರ್ತಕರು, ನೆರೆರಾಜ್ಯದವರು ಈ ಮಠಗಳಿಗೆ, ದೇವಾಲಯುಗಳಿಗೆ, ಬ್ರಹ್ಮಪುರಿಗಳಿಗೆ ದತ್ತಿ ಉಂಬಳಿ ಕೊಡುಗೆಗಳನ್ನು ನೀಡುತ್ತಿದ್ದರು.

ಹೊಯ್ಸಳ ದೊರೆಗಳ ಕಾಲದಲ್ಲಿ ಶಿಲ್ಪಕಲೆ ಹಾಗೂ ವಾಸ್ತು ಶಿಲ್ಪದಲ್ಲಿ ತರಬೇತಿ ಪಡೆದ ವಿಚಕ್ಷಣ ರೂವಾರಿಗಳು, ಶಿಲ್ಪಶಾಸ್ತ್ರಜ್ಞರು ಇದ್ದರೆಂದೂ ಅವರು ಸುಂದರವಾದ ಹಾಗೂ ಭವ್ಯವಾದ ದೇವಾಲಯುಗಳು, ಚೈತ್ರಗಳನ್ನು ನಿರ್ಮಿಸಿದ್ದರೆಂದು ತಿಳಿದುಬಂದಿದೆ.

**ಪುಟ 9 ಕ್ಕೆ ➢**



# ಹೃದಯ ಸಂಕ್ರಾಂತಿ

■ ಡಾ. ಎಲ್. ಶ್ರೀಧರ್
**Professor of Cardiology jayadeva institute of cardiology**

ಹೃದಯ ಮನುಷ್ಯನ ದೇಹದ ಪ್ರಮುಖ ಅಂಗ. ಆದರೆ ಹೃದ್ರೋಗಗಳಿಂದ ಬಳಲುತ್ತಿರುವವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ವಿಪರ್ಯಾಸವೆಂದರೆ ಮೊದಮೊದಲು ಹಿರಿಯ ವಯಸ್ಸಿನವರಲ್ಲಿ ಮಾತ್ರ ಕಾಣುತ್ತಿದ್ದ ಹೃದಯಾಘಾತ ಮುಂತಾದ ಹೃದ್ರೋಗಗಳು ಇತ್ತೀಚೆಗೆ ಹೆಚ್ಚು ಹೆಚ್ಚು ಯುವ ಜನಾಂಗವನ್ನು ಕಬಳಿಸುತ್ತಿದೆ. ಇದಕ್ಕೆ ಕಾರಣವೇನು? ಬದಲಾದ ಜೀವನ ಶೈಲಿಯೇ? ಹೆಚ್ಚುತ್ತಿರುವ ಮಧುಮೇಹ ರೋಗವೇ? ಆಹಾರ ವೈಪರೀತ್ಯದಿಂದುಂಟಾದ ಹೆಚ್ಚಿನ ಕೊಲೆಸ್ಟ್ರಾಲ್ ಅಂಶವೇ? ಅಥವಾ ನಮ್ಮ ಯುವ ಜನಾಂಗದಲ್ಲಿ ಒಂದು ಪಿಡುಗಾಗಿ ಕಾಡುತ್ತಿರುವ ಧೂಮಪಾನವೇ?

ಸ್ನೇಹಿತರೇ ಹೌದು. ಈ ಎಲ್ಲಾ ಕಾರಣಗಳು ನಮ್ಮಲ್ಲಿ ಹೆಚ್ಚುತ್ತಿರುವ ಹೃದ್ರೋಗಗಳಿಗೆ ಒಂದಲ್ಲ ಒಂದು ರೀತಿಯಲ್ಲಿ ಕಾರಣವಾಗಿದೆ. ಈ ಹೃದಯ ಎಂಬ ಸಂಸ್ಕೃತ ಪದದ ಉತ್ಪತ್ತಿಯನ್ನು "ಆಹರತಿ ದಮತಿ ಇತಿ ಹೃದಯಂ" ಯಾವುದು ತಿರುವು ಮತ್ತು ಹಂಚುವ ಕಾರ್ಯವನ್ನು ಮಾಡುತ್ತದೋ ಅದು ಹೃದಯ. ಮಲಿನಗೊಂಡ ರಕ್ತವನ್ನು ಶ್ವಾಸಕೋಶಗಳ ಮೂಲಕ ನಿರ್ಮಲಗೊಳಿಸಿ ಶರೀರದ ಎಲ್ಲಾ ಭಾಗಗಳಿಗೂ ಹಂಚುವುದೇ ಹೃದಯದ ಕೆಲಸ. ಈ ಕಾರ್ಯವು ಅಹರ್ನಿಶಿ ನಡೆಯುತ್ತ ಇರುತ್ತದೆ. ಈ ಹೃದಯ ರೋಗಗಳನ್ನು ತಡೆಗಟ್ಟಲು ಬಹುಮುಖ್ಯ ಸಾಧನಗಳು ಉತ್ತಮ ವ್ಯಾಯಾಮ ಮತ್ತು ನಿರ್ದಿಷ್ಟವಾದ ಆಹಾರ.

ವ್ಯಾಯಾಮ– ದೃಢವಾದ ಆರೋಗ್ಯವಾದ ದೇಹವನ್ನು ಪಡೆಯಲು ಬೇಕಾದ ಬಹುಮುಖ್ಯವಾದ ಸಾಧನ. ವ್ಯಾಯಾಮವು ಎಲ್ಲಾ ವಯಸ್ಸಿನವರಲ್ಲೂ ಅತ್ಯಂತ ಪ್ರಯೋಜನಕಾರಿ. ಆದ್ದರಿಂದ ' ಆರೋಗ್ಯಕ್ಕಾಗಿ ಚಲಿಸಿ' –ದಿನದಲ್ಲಿ ಕನಿಷ್ಠ 30 ನಿಮಿಷಗಳಾದರೂ ವ್ಯಾಯಾಮ ಮಾಡಿ. ಕಡಿಮೆ ಅಂದರೆ 30 ನಿಮಿಷ. ನಿಮ್ಮ ವ್ಯಾಯಾಮ ಅಧಿಕವಾದ ಹಾಗೆ ನಿಮಗೆ ಲಾಭಗಳೂ ಅಧಿಕ. ನಿಮ್ಮ ಹೃದಯದ ಆರೋಗ್ಯ ಉತ್ತಮವಾಗುತ್ತದೆ. ನೀವು ಶಕ್ತರಾಗಿದ್ದೀರಿ ಎಂಬ ಆತ್ಮವಿಶ್ವಾಸವನ್ನು ಉಂಟುಮಾಡುತ್ತದೆ. ಈ ವ್ಯಾಯಾಮ ನಿಮ್ಮ– ದಿನಚರಿಯ ಒಂದು ಅವಿಭಾಜ್ಯ ಅಂಗವಾಗಬೇಕು. ವಾರದ ಯಾವುದೋ ಒಂದು ದಿನ ಮಾಡಿ ಸುಮ್ಮನಾದರೆ ಪ್ರಯೋಜನವಿಲ್ಲ.

ಹಾಗೆಯೇ ನಿರ್ದಿಷ್ಟವಾದ ಆಹಾರ, 'ಊಟ ಬಲ್ಲವನಿಗೆ ರೋಗವಿಲ್ಲ' ಎಂಬ ನಾಣ್ನುಡಿಯಂತೆ, ಹೃದಯದ ಮೇಲೆ ಸತ್ಪರಿಣಾಮವನ್ನು ಬೀರುವ ಆಹಾರಗಳು Heart friendly food items. ಎಲ್ಲಾ ತರಹದ ತರಕಾರಿಗಳು, ಅದರಲ್ಲೂ ಎಲ್ಲಾ ರೀತಿಯ ಸೊಪ್ಪುಗಳು, ಹಾಗೇನೆ ಮೂಸಂಬಿ, ಬಾಳೆ, ಕಿತ್ತಲೆ ಮುಂತಾದ ತಾಜಾ ಹಣ್ಣುಗಳು ನಮ್ಮ ಹೃದಯದ ಆರೋಗ್ಯವನ್ನು ವೃದ್ಧಿಸುತ್ತದೆ.

ಹಾಗೆಯೇ ನಮ್ಮ ದೇಹದ ಆರೋಗ್ಯದ ಸಮೃದ್ಧಿಯ ಸಂಕೇತ ಹೃದಯದ ಆರೋಗ್ಯ. ಹೃದಯ ಆರೋಗ್ಯವಾಗಿದ್ದರೆ ಇಡೀ ದೇಹ ಸುಸ್ಥಿತಿಯಲ್ಲಿರಲು ಸಾಧ್ಯವಾಗುತ್ತದೆ. ಈ ಆರೋಗ್ಯದ ವೃದ್ಧಿಯನ್ನು ಮಾಡಲು ನಾವು ಮಾಡಬೇಕಾದ ಕೆಲಸವೆಂದರೆ ನಮ್ಮ ನಿತ್ಯಜೀವನ ಶೈಲಿಯಲ್ಲಿ ಬದಲಾವಣೆ ತಂದುಕೊಳ್ಳುವುದು. ಎಳ್ಳು, ಬೆಲ್ಲ, ಕೊಬ್ಬರಿ ಹೇಗೆ ಬೆರತಿದೆಯೋ ಅದೇ ರೀತಿ ನಿಯಮಿತ ಆಹಾರ, ಆವಶ್ಯಕ ವ್ಯಾಯಾಮ, ಮಧುಮೇಹ ನಿಯಂತ್ರಣ, ಒತ್ತಡ ರಹಿತ ಜೀವನ ಹಾಗೂ ಮಾನಸಿಕ ನೆಮ್ಮದಿ ಇವೆಲ್ಲವೂ ಬೆರೆತು ನಮ್ಮ ದೇಹದ ಆರೋಗ್ಯವನ್ನು ವೃದ್ಧಿಸಿ ನಾವು ಸಮಾಜದಲ್ಲಿ ಉತ್ತಮ, ಉಪಯುಕ್ತ ವ್ಯಕ್ತಿಯನ್ನಾಗಿ ಬಾಳುವಂತೆ ಮಾಡುತ್ತದೆ. ●

**ಎಂಥಾ ದುಃಖಗಳಲ್ಲಿಯೂ ಯಾರ ಬುದ್ಧಿ ಕುಂದುವುದಿಲ್ಲವೋ, ಅವನು ಅದರ ಪ್ರಭಾವದಿಂದಲೇ ಆ ದುಃಖಗಳನ್ನು ದಾಟುತ್ತಾನೆ.**
**– ಪಂಚತಂತ್ರ**

**ಇತರರ ದೋಷಗಳನ್ನು ಕುರಿತು ಮಾತಾಡಬೇಡಿ, ಅದು ಎಂತಹ ದೋಷವಾದರೂ ಚಿಂತೆಯಿಲ್ಲ. ಅದರಿಂದ ಏನೂ ಪ್ರಯೋಜನವಿಲ್ಲ. – ಸ್ವಾಮಿ ವಿವೇಕಾನಂದ**



# ವೇದ ಗಣಿತ
## ಸಂಖ್ಯೆಯ ವರ್ಗ ಕಂಡುಹಿಡಿಯುವುದು

### "ಯಾವದುನಂ ಸೂತ್ರ" ವಿಧಾನ (ನ್ಯೂನತೆ ವಿಧಾನ) ನಿಯಮಗಳು

ಹಂತ 1 : ದತ್ತ ಸಂಖ್ಯೆಯ ಆಧಾರ ಸಂಖ್ಯೆ ಕಂಡು ಹಿಡಿಯಿರಿ ಇದು 10,100,1000 ......... ಇತ್ಯಾದಿ.

ಹಂತ 2: ಆಧಾರ ಮತ್ತು ದತ್ತ ಸಂಖ್ಯೆಗಳ ನಡುವಿನ ವ್ಯತ್ಯಾಸ ಕಂಡುಹಿಡಿಯಿರಿ. ಇದೇ 'ನ್ಯೂನತಾ' ಬೆಲೆ

ಹಂತ 3: ನ್ಯೂನತಾ ಬೆಲೆಯನ್ನು ದತ್ತ ಸಂಖ್ಯೆಯಿಂದ ವ್ಯವಕಲನ ಮಾಡಿರಿ. ನಂತರ ಅದನ್ನು ಆಧಾರ ಸಂಖ್ಯೆಯಿಂದ ಗುಣಿಸಿ.

ಹಂತ 4: ನ್ಯೂನತಾ ಬೆಲೆಯ ವರ್ಗ ಕಂಡು ಹಿಡಿಯಿರಿ.

ಹಂತ 5: ಹಂತ 3 ಮತ್ತು ಹಂತ 4 ರ ಫಲಿತಾಂಶವನ್ನು ಕೂಡಿರಿ.

**ಇದೇ ಅಂತಿಮ ಉತ್ತರ**

ಉದಾಹರಣೆ : 93x93 (ಯಾವದುನಂ ಸೂತ್ರ ವಿಧಾನ)

ಹಂತ 1: ಸಂಖ್ಯೆ 93ಕ್ಕೆ ಸಮೀಪ ಆಧಾರ ಸಂಖ್ಯೆ 100

ಹಂತ 2: 100–93= 7 ಇದೇ ನ್ಯೂನತಾ ಬೆಲೆ

ಹಂತ 3: (93–7) x 100 = 86x100= 8600

ಹಂತ 4: 7x7= 49

ಹಂತ 5: 8600+49= 8649

dfew 932 = $93^2$x$93^2$= 8649

### 100 ಮತ್ತು 200 ರ ನಡುವಿನ ಮೂರಂಕಿ ಸಂಖ್ಯೆಯ ವರ್ಗ ಕಂಡುಹಿಡಿಯುವ ಜಗತ್ತಿನ ಅತ್ಯಂತ ಶೀಘ್ರ ವಿಧಾನ

**ನಿಯಮಗಳು**

ಹಂತ 1: 100 ಮತ್ತು 200 ರ ನಡುವೆ ಒಂದು ಸಂಖ್ಯೆ ಆರಿಸಿಕೊಳ್ಳಿ. ಕಡೆಯ ಎರಡು ಅಂಕಿಯ ಸಂಖ್ಯೆಯನ್ನು ಆರಿಸಿರುವ ಸಂಖ್ಯೆಗೆ ಕೂಡಿರಿ.

ಹಂತ 2: ಬಂದ ಉತ್ತರವನ್ನು 100 ರಿಂದ ಗುಣಿಸಿ

ಹಂತ 3: ಕಡೆಯ ಎರಡಂಕಿ ಸಂಖ್ಯೆಯ ವರ್ಗಕಂಡುಹಿಡಿಯಿರಿ

ಹಂತ 4: ಹಂತ 2 ಮತ್ತು ಹಂತ 3 ರ ಫಲಿತಾಂಶವನ್ನು ಕೂಡಿರಿ. ಇದೇ ಅಂತಿಮ ಉತ್ತರ

ಉದಾಹರಣೆ : 123 ರ ವರ್ಗ = 123x123 (ಅತ್ಯಂತ ಶೀಘ್ರ ವಿಧಾನ)

ಹಂತ 1 : ಆಯ್ಕೆ ಮಾಡಿದ ಸಂಖ್ಯೆ 123ರ ಕಡೆಯ ಎರಡು ಅಂಕಿ ಸಂಖ್ಯೆ 23ರನ್ನು ಕೂಡಿದಾಗ 123+23=146 ಆಗುತ್ತದೆ

ಹಂತ 2 : 146x100 =14600

ಹಂತ 3 : 23x23 = 529

ಹಂತ 4 : 14600 + 529 = 15129

$123^2$ = 123x123 = 15129

**✍ ಡಾ॥ ರಾಮಚಂದ್ರ ಜಿ. ಸರ್ಕಾರಿ ಪ್ರೌಢಶಾಲೆ, ಬೇಗೂರು**

## ಯಾದಗಿರಿ ಜಿಲ್ಲಾ ಘಟಕದ ಸಭೆ

ದಿನಾಂಕ 11–9–2016 ರಂದು ಶಹಾಪುರದಲ್ಲಿ ನಡೆದ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ರಿ.) ಯಾದಗಿರಿ ಜಿಲ್ಲಾ ಘಟಕದ ಸಭೆಯಲ್ಲಿ ಸಂಘದ ರಾಜ್ಯ ಉಪಾಧ್ಯಕ್ಷರಾದ ಶ್ರೀ ಆರ್ ಕೊಟ್ರಪ್ಪ ಜಿ., ಉಪಪ್ರಾಚಾರ್ಯರಾದ ಶ್ರೀ ಲಿಂಗಣ್ಣ ಸಿಂಪಿ, ಚಿಂತಮ್ಮ ಗೌಡತಿ ಕಾಲೇಜಿನ ಪ್ರಾಚಾರ್ಯರಾದ ಶ್ರೀ ಮಲ್ಲಿಕಾರ್ಜುನ್ ಅವಂಟಿ, ಶ್ರೀ ಸೋಮಶೇಖರಯ್ಯ ಹಿರೇಮಠ ಜಿಲ್ಲಾ ಅಧ್ಯಕ್ಷರಾದ ಶ್ರೀ ಅನಿಲ್ ಕುಮಾರ್ ಬಿರಾದಾರ್, ಜಿಲ್ಲಾ ಗೌರವ ಅಧ್ಯಕ್ಷರಾದ ಶ್ರೀ ಸುಧಾಕರ್ ಗುಡಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀ ಬಿ.ಜಿ. ಪಾಟೀಲ್ ಹಾಗೂ ಜಿಲ್ಲಾ ಘಟಕದ ಪದಾಧಿಕಾರಿಗಳು, ಜಿಲ್ಲೆಯ ವಿವಿಧ ಶಾಲೆಯ ಶಿಕ್ಷಕರು ಭಾಗವಹಿಸಿ ಜಿಲ್ಲಾ ಘಟಕದ 2016–19 ಕ್ಕೆ ಘಟಕದ ಪುನಾರಚನೆಗೆ ಸಾಕ್ಷಿಯಾದರು.

## ಸಂಘದ ವಾರ್ತೆ

# ಬೆಂಗಳೂರಿನಲ್ಲಿ ದೇಶ ವಿರೋಧಿ ಘೋಷಣೆಗಳನ್ನು ಕೂಗಿದ ರಾಷ್ಟ್ರ ದ್ರೋಹಿಗಳ ವಿರುದ್ಧ ಕಠಿಣ ಕ್ರಮಕ್ಕೆ ಒತ್ತಾಯ

ಬೆಂಗಳೂರು ವಸಂತನಗರದಲ್ಲಿರುವ ದಿ ಯೂನೈಟೆಡ್ ಥಿಯೋಲಾಜಿಕಲ್ ಕಾಲೇಜಿನಲ್ಲಿ ಅಮ್ನೆಷ್ಟಿ ಇಂಟೆರನ್ಯಾಷನಲ್ ಸಂಸ್ಥೆಯವರು ಆಯೋಜಿಸಿದ್ದ "ಮುರಿದ ಮನೆಗಳು" ಎಂಬ ಹೆಸರಿನ ಕಾರ್ಯಕ್ರಮದಲ್ಲಿ ದೇಶ ವಿಭಜಿಸುವ ಘೋಷಣೆಗಳನ್ನು ಕೂಗಿದ್ದು ಮತ್ತು ಉಗ್ರವಾದಿಗಳನ್ನು ಹುತಾತ್ಮನನ್ನಾಗಿಸುವ ಪ್ರಯತ್ನವನ್ನು KRMSS ಬಲವಾಗಿ ಖಂಡಿಸುತ್ತದೆ. ಅತ್ಯಂತ ಶಿಸ್ತು ಬದ್ಧ ಭಾರತೀಯ ಸೈನ್ಯವನ್ನು ಖಳಾನಾಯಕನನ್ನಾಗಿಸುವ ದೇಶದ್ರೋಹಿಗಳ ಕುತಂತ್ರವನ್ನು ಖಂಡಿಸಿದ್ದಕ್ಕಾಗಿ ಅ.ಭಾ.ವಿ.ಪ. ಕಾರ್ಯಕರ್ತರನ್ನು ಬಂಧಿಸಿರುವುದು ಖಂಡನೀಯ.

ಈ ರೀತಿಯ ಕೃತ್ಯಗಳು ಮತ್ತು ಕಾರ್ಯಕ್ರಮಗಳು ನಮ್ಮ ಹೆಮ್ಮೆಯ ಸೈನ್ಯದ ಸ್ಫೂರ್ತಿ ಕುಂದಿಸುವುದಲ್ಲದೇ ಈ ಮಹಾನ್ ರಾಷ್ಟ್ರವನ್ನು ಅಸ್ಥಿರಗೊಳಿಸುವ ಸಂಚು ಎಂದು KRMSS ಉಚ್ಚ ಶಿಕ್ಷಣ ವಿಭಾಗದ ಅಧ್ಯಕ್ಷರಾದ ಶ್ರೀ ರಘು ಅಕ್ಮಂಚಿ ಮತ್ತು ಮಾಧ್ಯಮಿಕ ಶಿಕ್ಷಕ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಂದೀಪ ಬೂದಿಹಾಳ ಹೇಳಿದ್ದಾರೆ. ವಿದೇಶಿ ಹಣ ಸಹಾಯದಿಂದ ಕಾರ್ಯ ನಿರ್ವಹಿಸುವ ಅಮ್ನೆಷ್ಟಿ ಇಂಟರ್‌ನ್ಯಾಷನಲ್‌ನಂತಹ ಸರಕಾರೇತರ ಸಂಸ್ಥೆಗಳು ಈ ರೀತಿಯ ಕಾರ್ಯಕ್ರಮಗಳಿಂದ, ದೇಶವನ್ನು ಅಸ್ಥಿರಗೊಳಿಸಲು ಯತ್ನಿಸುತ್ತಿವೆ. ದೇಶ ವಿರೋಧಿ ಮನಃಸ್ಥಿತಿಯನ್ನು ಉತ್ತೇಜಿಸುತ್ತಿದೆ. ಇದು ಖಂಡನೀಯ. ತಮ್ಮ ಅನುಕೂಲಕ್ಕೆ ತಕ್ಕಂತೆ ಕಾಶ್ಮೀರದ ಹಿಂದುಗಳ ಮೇಲೆ ನಡೆದ ದೌರ್ಜನ್ಯ ಹಾಗೂ ಅವರು ನಿರಾಶ್ರಿತ ಶಿಬಿರಗಳಲ್ಲಿ ದಶಕಗಳಿಂದ ವಾಸವಾಗುವಂತೆ ಮಾಡಿ ಅವರ ಮಾನವ ಹಕ್ಕುಗಳ ಉಲ್ಲಂಘನೆಯನ್ನು ಅಮ್ನೆಷ್ಟಿ ಇಂಟರ್‌ನ್ಯಾಷನಲ್‌ನಂತಹ ಸಂಸ್ಥೆಗಳು ನಿರ್ಲಕ್ಷಿಸುತ್ತಿರುವುದು ಖಂಡನೀಯ. ಸಮೃದ್ಧ, ಸುಸಂಸ್ಕೃತವಾದ ರಾಷ್ಟ್ರ ನಿರ್ಮಾಣಕ್ಕೆ ಬೇಕಾದ ಯೋಗ್ಯ ವ್ಯಕ್ತಿಗಳನ್ನು ನಿರ್ಮಾಣ ಮಾಡುವುದು ಶಿಕ್ಷಣ ಸಂಸ್ಥೆಗಳ ಉದ್ದೇಶ. ಆದರೆ ತುಮಕೂರಿನ ಶಿಕ್ಷಣ ಸಂಸ್ಥೆಯಲ್ಲಿ ದೇಶದ್ರೋಹಿ ಘೋಷಣೆಗಳನ್ನು ಕೂಗಿದವರ ವಿರುದ್ಧ ಪೋಲೀಸರು ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕೆಂದು KRMSS ಆಗ್ರಹಿಸುತ್ತದೆ. ಅಲ್ಲದೇ ವಿದೇಶಿ ಧನ ಸಹಾಯದಿಂದ ಕಾರ್ಯ ನಿರ್ವಹಿಸುತ್ತಿರುವ ಇಂತಹ ಸ್ವಯಂ ಸೇವಾ ಸಂಘಟನೆಗಳು ದೇಶದ ಸಮಗ್ರತೆಯ ಮೇಲೆ ಹಲ್ಲೆ ಮಾಡದಂತೆ ಕೇಂದ್ರ ಸರಕಾರವು ಕ್ರಮಕೈಗೊಳ್ಳಬೇಕೆಂದು ಶ್ರೀ ರಘು ಅಕ್ಮಂಚಿ ಮತ್ತು ಶ್ರೀ ಸಂದೀಪ ಬೂದಿಹಾಳ ಒತ್ತಾಯಿಸಿದರು.

# ಶಿಕ್ಷಕರ / ಉಪನ್ಯಾಸಕರ ಸಮಸ್ಯೆಗಳ ಕುರಿತು ಸಭೆ

ದಿನಾಂಕ 13, ಸೆಪ್ಟಂಬರ್ 2016, ಮಂಗಳವಾರ ಬೆಳಗ್ಗೆ 11.00 ಕ್ಕೆ ವಿಜಯನಗರ ಪಿ.ಯು. ಕಾಲೇಜ್, ವಿದ್ಯಾನಗರ, ಹುಬ್ಬಳ್ಳಿಯಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಧಾರವಾಡ ಜಿಲ್ಲಾ ಘಟಕದ ವತಿಯಿಂದ ಶಿಕ್ಷಕರ / ಉಪನ್ಯಾಸಕರ ಸಮಸ್ಯೆಗಳ ಕುರಿತು ಸಭೆ ನಡೆಯಿತು. ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಸ್.ವ್ಹಿ. ಸಂಕನೂರವರು ಈ ಸಭೆಯನ್ನು ಉದ್ದೇಶಿಸಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು 1965ರಿಂದ ಇಲ್ಲಿಯವರೆಗೂ ಶಿಕ್ಷಕರ ಹಿತಕ್ಕಾಗಿ ಕಾರ್ಯ ಮಾಡುತ್ತಾ ಇದೆ ಈ ಭಾಗದಲ್ಲಿ ಇನ್ನು ಗಟ್ಟಿಯಾಗಿ ನೆಲೆವೂರಿ ಬೆಳೆಯಬೇಕಾಗಿದೆ

ಮಾಧ್ಯಮಿಕ ಶಿಕ್ಷಕ ಸಂಘ ಒಬ್ಬ ವ್ಯಕ್ತಿಯ ಹೆಸರಿನ ಮೇಲೆ ನಿಂತ ಸಂಘಟನೆ ಅಲ್ಲ, ರಾಜಕೀಯ ಲಾಭಕ್ಕಾಗಿ ಕಟ್ಟಿರುವ ಸಂಘಟನೆಯೂ ಅಲ್ಲ, ಬದಲಿಗೆ ರಾಷ್ಟ್ರೀಯ ಹಿತಾಸಕ್ತಿ ತತ್ವಗಳ ಆಧಾರದ ಮೇಲೆ ಕಟ್ಟಲ್ಪಟ್ಟ ಸಂಘಟನೆಯಾಗಿದೆ ಮತ್ತು ಶಿಕ್ಷಕರ ಯಾವುದೇ ಸಮಸ್ಯೆಗಳಿಗೂ ಸದಾ ಸ್ಪಂದಿಸಲು ನಾನು ಸಿದ್ಧ ಎಂದು ನುಡಿದರು. ಶಿಕ್ಷಕರ ಸಮಸ್ಯೆಗಳಾದ ಹುದ್ದೆಯಲ್ಲಿ ಬಡ್ತಿ, ಕಾಲ್ಪನಿಕ ವೇತನ ಹಾಗೂ ವೇತನ ತಾರತ್ಯಮ ಹೀಗೆ ಹತ್ತು ಹಲವು ಸಮಸ್ಯೆಗಳ ಕುರಿತಾಗಿ ಸಂವಾದ ನಡೆಸಿದರು.

ಸಭೆಯಲ್ಲಿ ರಾಜ್ಯ ಸಹ-ಪ್ರಧಾನ ಕಾರ್ಯದರ್ಶಿ ಶ್ರೀ ಸಂದೀಪ ಬೂದಿಹಾಳರವರು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಇತಿಹಾಸ, ಹಿನ್ನಲೆ, ಗುರಿ, ಉದ್ದೇಶಗಳ ಬಗ್ಗೆ ಸವಿವರವಾಗಿ ಹೇಳುತ್ತಾ ಈ ಸಂಘಟನೆ 'ರಾಷ್ಟ್ರದ ಹಿತಕ್ಕಾಗಿ ಶಿಕ್ಷಣ, ಶಿಕ್ಷಣದ ಹಿತಕ್ಕಾಗಿ ಶಿಕ್ಷಕ, ಶಿಕ್ಷಕನ ಹಿತಕ್ಕಾಗಿ ಸಮಾಜ' ಧ್ಯೇಯದಡಿಯಲ್ಲಿ ತನ್ನ ಕಾರ್ಯಚಟುವಟಿಕೆಗಳನ್ನು ಮಾಡುತ್ತಿದೆ. ಈ ಸಂಘಟನೆಯಲ್ಲಿ ಶಿಕ್ಷಣದ ಸಲುವಾಗಿ ಕಾರ್ಯ ಮಾಡುತ್ತಿರುವ ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ಕಾಲೇಜಿನ ಆಡಳಿತ ಮಂಡಳಿ, ಪ್ರಾಚಾರ್ಯರು, ಮುಖ್ಯೋಪಾಧ್ಯಾಯರು, ಉಪನ್ಯಾಸಕರು, ಸಹ ಶಿಕ್ಷಕರು, ದೈಹಿಕ, ಚಿತ್ರಕಲೆ ಶಿಕ್ಷಕರು ಹೀಗೆ ಎಲ್ಲ ಬೋಧಕ-ಬೋಧಕೇತರರು ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದರು.

ಸಭೆಯಲ್ಲಿ ಮುಂದಿನ ಮೂರು ವರ್ಷಗಳ ಹೊಸ ಜಿಲ್ಲಾ ಘಟಕ ರಚಿಸಲಾಯಿತು. ಈ ಸಭೆಯಲ್ಲಿ ಜಿಲ್ಲಾ ಘಟಕದ ಅಧ್ಯಕ್ಷರಾದ ಶ್ರೀಧರ ಪಾಟೀಲ ಕುಲಕರ್ಣಿ, ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಸವರಾಜ ದೇವರಮನಿ, ಖಜಾಂಚಿಗಳಾದ ಶ್ರೀ ರವಿಚಂದ್ರ ಕೊಣ್ಣೂರ ಉಪಸ್ಥಿತರಿದ್ದರು.

# ಪರೀಕ್ಷೆ

✍ ಡಾ|| ರಾಮಚಂದ್ರ ಜಿ.
ಸರ್ಕಾರಿ ಪ್ರೌಢಶಾಲೆ, ಬೇಗೂರು

ಈಕ್ಷೆ ನಿರೀಕ್ಷೆಗಳ ಕಕ್ಷೆ ? ಪರೀಕ್ಷೆ
ಕೆಲ ವಿದ್ಯಾರ್ಥಿಗಳಿಗೆ ಇದೊಂದು ರೀತಿ 'ಶಿಕ್ಷೆ'
ಹಲವು ವಿದ್ಯಾರ್ಥಿಗಳು ನಡೆವರೊಂದು ಕಕ್ಷೆ
ಹೊತ್ತು ತಮ್ಮೊಂದಿಗೆ ನೂರಾರು ಆಕಾಂಕ್ಷೆ
ಕೆಲವು ವಿದ್ಯಾರ್ಥಿಗಳು ಉಳಿವರದೇ ಕಕ್ಷೆ
ಇತ್ತು ತಮ್ಮೊಂದಿಗೆ ಸಾವಿರಾರು ಉಪೇಕ್ಷೆ

ಆವರಿಸಿತ್ತು ಕೊಠಡಿಯಲ್ಲಿ ಮಸಣದ ಮೌನ
ಆವ ದಿನವೂ ತರಗತಿಯಲ್ಲಿ ಕಂಡಿರಲಿಲ್ಲ 'ಈ' ಗಾನ
ಯಾವ ಪ್ರಶ್ನೆಗೆ ಯಾವ ಉತ್ತರ ? ಎನ್ನುತ್ತಿತ್ತು ಮನ
ಯಾವ ಪ್ರಶ್ನೆಗೂ ಉತ್ತರಿಸದಿರೆ ಆಗುವುದು ಅವಮಾನ
ಕಣ್ಗಳು ಉತ್ತರಕ್ಕೆ ನೋಡುತ್ತಿತ್ತು ಬಾನ
ಕಾಣದೆ ಕಾಣ್ವ 'ಮರೀಚಿಕೆ' ಉತ್ತರ ಎಂದಿತು ಹೃನ್ಮನ

ಶಿಕ್ಷಕನ ಗಂಟಲು ಪಡೆಯುತ್ತಿತ್ತು ವಿಶ್ರಾಂತಿ
ಏಕೋ ತಳಮಳಿಸುತ್ತಿತ್ತು ಒಳಗೊಳಗೇ ಭ್ರಾಂತಿ
ಒಮ್ಮೆ ಓಡಾಡಿ ನೋಡಲು ವಿದ್ಯಾರ್ಥಿ 'ಅತಿಥಿ'
ಜುಮ್ಮೆನ್ನಿಸಿತು ನೋಡಿ ಅವರ ಸ್ಥಿತಿ ? ಗತಿ
ಕೆಲವು ಉತ್ತರದಿ ಹೊಳೆಯುತ್ತಿತ್ತು ಕಾಂತಿ
ಕೆಲ ಛಾತ್ರರು ಉತ್ತರದಿ ಗೈದಿದ್ದರು ಶಾಹಿ ವಾಂತಿ

ಎರಡು ಕೈ ಸೇರದಿರೆ ಆಗದಿರದು ಚಪ್ಪಾಳೆ
ಶಿಕ್ಷಕನು ಉತ್ತುವ ವಿದ್ಯಾರ್ಥಿ ಬೆಳೆ
ತಾಯ್ತಂದೆ ಹರಿಸೆ ನಡತೆ ಮಳೆ
ವಿದ್ಯಾರ್ಥಿ ಗ್ರಹಿಸೆ  ಜ್ಞಾನದ ಇಳೆ
ಅಜ್ಞಾನ ಆಲಸ್ಯ ಆಗದಿರೆ ಬೆಳೆ ? ಕಳೆ
ಕಲೆತ ಕಲಿಪ ಕಲಿತರ್ಗಳ್ಗೆ 'ವಿಜಯ' ಕಹಳೆ

ಪರಿವೀಕ್ಷಕ ಪಡೆದ ನಿದ್ರೆಯ ಕಣ್ತಪ್ಪು
ಪರಿಪರಿಯಲಿ ನಕಲಿಸಿದವು ಛಾತ್ರಗುಂಪು ? ಬೆಪ್ಪು
ಬರೆದಿದ್ದವು ಕೆಲವು ತಪ್ಪು ಹಲವು ಒಪ್ಪು
ತರುತಿತ್ತು ರುಚಿಗಳು ? ಸಿಹಿ ಕಹಿ ಖಾರ ಉಪ್ಪು
ಬಾರಿಸಿತು ಘಂಟೆ ? ತಂದಿತು ಪರೀಕ್ಷೆಗೆ ಮುಪ್ಪು
ಬರೆದು ಬರೆಸಿ ಬರೆ ಎಳೆಸಿಕೊಳ್ಳುವ ಜೀವನದ ಕಪ್ಪು–ಬಿಳ್ಪು

ಮುನ್ನೂರು ದಿನ ಕಲಿತದ್ದು, ಮೂರು ತಾಸಲ್ಲಿ ಅಳತೆ!
ಮೂರು ಪದವಿಯಿಂ ಕಲಿಸಿದ್ದವನ ಮೂರು ಹಾಳೆಯಲ್ಲಳತೆ
ಇರಬೇಕು ಯಾವುದೇ ಕಾರ್ಯದಿ ತಲ್ಲೀನತೆ
ಇಲ್ಲದಿರೆ ಆಗುವುದೀ ಜೀವನ ಪರೀಕ್ಷೆ ಒಂದು ವ್ಯಥೆ ? ಕತೆ
ಪರೀಕ್ಷೆ ಆಗಲಿ ಒಂದು ಚಂದನ ತರುಲತೆ
ಹರಡಲಿ ಎಲ್ಲೆಡೆ ಪ್ರತಿ ಬಾರಿ ಮೊದಲು
ಪ್ರಾಮಾಣಿಕತೆ – ಮಾನವೀಯತೆ

# ಭಾರತಮಾತೆ

✍ ಕು. ಲಕ್ಷ್ಮಿ
ಬಿ.ಇ. ವಿದ್ಯಾರ್ಥಿನಿ
ಯು.ವಿ.ಸಿ.ಇ.

ಸಿರಿ ಸಮೃದ್ಧಿಯ ಶ್ರೀಮಂತೆ
ಏನವಳ ವೈಭವದ ಶ್ರೇಷ್ಠತೆ
ಆಕರ್ಷಣೆಗೊಳಗಾಗಿತ್ತು ಜಗತ್ತೇ
ಅಂದು ಕಂಡೆಮ್ಮ ಭಾರತಮಾತೆಶಶ

ಸೆಳೆವ ಹಕ್ಕಿಯ ಸೆರೆಯಲಿಡುವರಂತೆ
ಮಸಿಕಾಗೆಯ ಬಿಡವರು ಇಲ್ಲದೆ ಚಿಂತೆ
ದೇಶವ ಹೊಕ್ಕವು ಕೆಂಪುಕೋತಿಗಳಂತೆ
ದೋಚುತ ಇಲ್ಲಿನೆಲ್ಲಾ ಸಿರಿ ಸಂಪತ್ತೇ

ವ್ಯಾಪಾರಕ್ಕಾಗಿ ಬಂದೆವು ಎಂದರಂತೆ
ಒಡೆದಾಳುವ ನೀತಿಯ ಬಿತ್ತರಂತೆ
ತುತ್ತು ಅನ್ನಕ್ಕಾಗಿ ಬಂದನಾಯಿಗಳಂತೆ
ತಿಂದು ಕೊಬ್ಬುತ್ತಾ ನಮ್ಮನ್ನೇ ಕಚ್ಚಿತೆ

ಬ್ರಿಟಿಷರ ದಬ್ಬಾಳಿಕೆಯು ಮೆರೆದಂತೆ
ನಮ್ಮನು ಅಡಿಯಾಳಾಗಿ ದುಡಿಸಿದರಂತೆ
ಜಲಿಯನ್ ವಾಲಿಬಾಗ್ ಮರೆಯಲಾದಿತೇ
ನೆತ್ತರೇ ಬೆವರಾಗಿ ಹರಿದ ದುರಂತ ಕಥೆ

ಅಲ್ಲಲ್ಲಿ ಸ್ವಾತಂತ್ರ್ಯದಕಿಡಿಯು ಹೊತ್ತಿತಂತೆ
ಹೊತ್ತಿದ ಕಿಡಿಯು ಕಾಡ್ಗಿಚ್ಚಂತೆ ಹಬ್ಬಿತ್ತೆ
ನಮ್ಮ ನೆಲದಲ್ಲಿ ಪರಕೀಯರ ದವಲತ್ತೆ
ರಾಜ್ಗುರು, ಸುಖ್ದೇವ್, ಭಗತ್ ಸಿಡಿದೆದ್ದರಂತೆ

ಶಾಂತಿಯೆಂದ ಮಹಾತ್ಮ ಬುದ್ಧನಂತೆ
ಕ್ರಾಂತಿಯ ಹಾದಿಯು ಬೋಸ್ ರದಂತೆ
ಸ್ವಾತಂತ್ರ್ಯದ ಕನಸ ಕಂಡರಂತೆ
ಪ್ರಾಣವೇ ಪಣಕಿಟ್ಟು ಮಡಿದರಂತೆ

ಈ ಹೋರಾಟ, ತ್ಯಾಗಕೆ ಬೆಚ್ಚಿದರಂತೆ
ರಾತ್ರೋರಾತ್ರಿ ಇಂಗ್ಲಿಷರು ಕಾಲ್ಕಿತ್ತರಂತೆ
ಸೂರ್ಯಮುಳುಗದ ನಾಡಿನವರಂತೆ
ಉದಯಕುಮುನ್ನ ಸಾಗರದಾಟಿದರಂತೆ

ಮಧ್ಯರಾತ್ರಿಯಲಿ ಸ್ವತಂತ್ರ ಧ್ವಜ ಹಾರಿತೆ
ಅದೆಷ್ಟೋ ಭಾರತೀಯರ ಕೂಗದು ಅಂತೆ
ಗಳಿಸಿದ  ಸ್ವತಂತ್ರವ ಸಿಕ್ಕಿತೆನ್ನುವರಂತೆ
ಸಿಕ್ಕಿದ ವಸ್ತುವಿಗೆ ಬೆಲೆಯು ಬಂದಿತೆ

ಹೆಮ್ಮೆಯಲಿ ಹೇಳುವ ಗಳಿಸಿದೆವು ನಾವು ಸ್ವಾತಂತ್ರ್ಯವ....
ಉಳಿಸಿಕೊಳ್ಳಬೇಕಿದೆ, ನೆನೆಸುತ ಹೋರಾಡಿ–ಮಡಿದ ನಮ್ಮವರನೆಲ್ಲವ....

➢ ಪುಟ 3 ರಿಂದ..... ರಾಷ್ಟ್ರಸೇವೆ

ಕೆಲಸಕ್ಕೆ ಹಣ ಸಿಗಬಹುದೇ ಎಂದು ವಿಚಾರಿಸಿದ್ದರು. 'ನೋಡಿ ಹೇಳುತ್ತೇನೆ' ಎಂದು ಶಾಸ್ತ್ರಿಗಳೂ ಹೇಳಿದ್ದರು. ಆದರೆ, ಆ ಸ್ನೇಹಿತರ ಕಷ್ಟವನ್ನು ನೋಡಲಾಗದೆ ಶಾಸ್ತ್ರಿಗಳ ಹೆಂಡತಿ, ಮರುದಿನವೇ ಕರೆದು ತಾವು ಅಡಿಗೆಮನೆಯ ಡಬ್ಬಿಗಳಲ್ಲಿ ಕಾಯ್ದಿರಿಸಿದ್ದ ಒಂದಿಷ್ಟು ಹಣವನ್ನು ಕೊಟ್ಟು ಕಳಿಸಿದರು. ಶಾಸ್ತ್ರಿಗಳು ಮನೆಗೆ ಬಂದಾಗ ಅವರ ಹೆಂಡತಿ ಈ ವಿಷಯವನ್ನು ತಿಳಿಸಿದಾಗ, ಶಾಸ್ತ್ರಿಗಳು ಏನು ಮಾಡಿದರು ಗೊತ್ತೇ. ನೇರವಾಗಿ ಆಫೀಸ್‌ಗೆ ಫೋನ್ ಮಾಡಿ, ಮುಂದಿನ ತಿಂಗಳಿನಿಂದ, ಪ್ರಧಾನಮಂತ್ರಿಯವರ ಸಂಬಳವನ್ನು ಕಡಿಮೆ ಮಾಡಿ ಎಂದು ಶಿಫಾರಸು ಮಾಡಿದರು.

ಎಂಥಾ ಪರಿಶುದ್ಧ ರಾಜಕಾರಣ. ತನ್ನ ಅವಶ್ಯಕತೆಗೂ ಮೀರಿ ಹೆಚ್ಚಿನ ಹಣ ನನ್ನಲ್ಲಿ ಸಂಗ್ರಹವಾಗುತ್ತಿದೆ ಎಂದು ತಿಳಿದೇ, ಜನರ ಹಣ ಅವರಿಗೆ ಸೇರಲಿ ಎಂದು ಭಾವಿಸಿದ್ದ ಆ ರಾಜಕಾರಣವೆಲ್ಲಿ, ಈಗಿನ ಭ್ರಷ್ಟ ರಾಜಕಾರಣವೆಲ್ಲಿ..

ಇದೊಂದು ಬಹುಮುಖ್ಯ ಜೀವನ ಮೌಲ್ಯ. ಹಣದ ಸಂಪಾದನೆ ಅನ್ನೋದು, ಬದುಕಿನ ಅವಶ್ಯಕತೆ ತುಂಬಿಸುವಷ್ಟು ಇರಬೇಕು. ಬದುಕಿನ ವೈಭವಕ್ಕೆ ಅಲ್ಲ.

• ಒಮ್ಮೆ ಶಾಸ್ತ್ರಿಯವರು ಬಟ್ಟೆಗಳನ್ನು ತಯಾರಿಸುವ ಮಿಲ್‌ಗೆ ಹೋಗಿದ್ದರು. ಆಗ ಅದರ ಮಾಲೀಕ, 500, 600 ರೂಪಾಯಿಗಳ ಸೀರೆಗಳನ್ನು ತೋರಿಸಿ, ಅದನ್ನು ಪ್ರಧಾನಮಂತ್ರಿಯವರಿಗೆ ಕಾಣಿಕೆ ಎಂದು ಕೊಡಲು ಮುಂದಾದ. ಆಗ ಶಾಸ್ತ್ರಿಯವರು, 'ಇದಕ್ಕಿಂತ ಕಡಿಮೆ ಬೆಲೆಯ, ನನ್ನಂತಹ ಬಡವರು ಕೊಳ್ಳಬಹುದಾದ ಸೀರೆ ತೋರಿಸಿ' ಎಂದರಂತೆ. ಮಿಲ್ ನ ಮಾಲೀಕ ನಕ್ಕು, 'ಸ್ವಾಮಿ, ನೀವು ಈ ದೇಶದ ಪ್ರಧಾನಮಂತ್ರಿಗಳು, ನಿಮಗೆ ಕಾಣಿಕೆ ಕೊಡುವುದು ನಮ್ಮ ಭಾಗ್ಯ, ಸ್ವೀಕರಿಸಿ' ಎಂದನಂತೆ. ಅದಕ್ಕೆ ಶಾಸ್ತ್ರಿಗಳು 'ನಾನು ಪ್ರಧಾನ ಮಂತ್ರಿಯಾದ ಮಾತ್ರಕ್ಕೆ, ನನ್ನ ಕೈಯಲ್ಲಿ ಖರೀದಿ ಮಾಡಲು ಸಾಧ್ಯವಾಗದ್ದನ್ನು ಕಾಣಿಕೆ ರೂಪದಲ್ಲಿ ತೆಗೆದುಕೊಳ್ಳಲು ಸಾಧ್ಯವಿಲ್ಲ. ಅದು ಅನೈತಿಕವಾಗುತ್ತದೆ. ಅಂಥದ್ದನ್ನು ನನ್ನ ಹೆಂಡತಿಯೂ ಉಡುವುದಿಲ್ಲ.' ಎಂದು ಹೇಳಿ, ಕೊನೆಗೆ ತಮ್ಮ ಹತ್ತಿರವಿದ್ದ ಹಣದಲ್ಲಿ ಯಾವ ಸೀರೆಯನ್ನು ಕೊಳ್ಳಬಹುದೋ ಆ ಸೀರೆಯನ್ನಷ್ಟೇ ಖರೀದಿಸಿದರು.

ಇಂತಹ ಸರಳ ಬದುಕನ್ನು, ಮತ್ತಾವ ನಾಯಕರಲ್ಲೂ ಕಾಣಲು ಸಾಧ್ಯವೇ ಇಲ್ಲ. ಶಾಸ್ತ್ರಿಗಳ ಸರಳತೆಗೆ ಅವರೇ ಸಾಟಿ..

ಇವೆಲ್ಲವೂ ನಾವು ಜೀವನದುದ್ದಕ್ಕೂ ಕಲಿಯಬೇಕಾದ ನೀತಿಗಳು. ಸರಳತೆ, ಪ್ರಾಮಾಣಿಕತೆ, ರಾಷ್ಟ್ರಪ್ರೇಮ, ಸತ್ಯಸಂಧತೆ, ನೈತಿಕತೆ, ಉದಾರ ಮನೋಭಾವ ಇವೆಲ್ಲವೂ ಮನುಷ್ಯನನ್ನು ಪರಿಪೂರ್ಣ ವ್ಯಕ್ತಿಯನ್ನಾಗಿ ಮಾಡುತ್ತವೆ. ಜೀವನದಲ್ಲಿ ನಾವು ದೊಡ್ಡ ಮಟ್ಟಕ್ಕೆ ಏರುವ ಕನಸು ಕಾಣುವಂತೆ, ಇಂತಹ ಗುಣಗಳನ್ನು ಬೆಳೆಸಿಕೊಳ್ಳಲೂ ಶ್ರಮಿಸಬೇಕು. ಹಾಗಾದಾಗ ನಮ್ಮ ಬದುಕೂ ಮತ್ತು ತನ್ಮೂಲಕ ಈ ರಾಷ್ಟ್ರದ ಭವಿಷ್ಯವೂ ಬೆಳಗುತ್ತದೆ.

ಇದೇ ಅಕ್ಟೋಬರ್ ಎರಡರಂದು ಈ ಇಬ್ಬರೂ ಮಹಾತ್ಮರ ಹುಟ್ಟಿದ ದಿನ. ಈ ಕ್ಷಣದಿಂದ, ನಾವೆಲ್ಲರೂ ಅಂತಹ ಮೌಲ್ಯಯುತ ಬದುಕನ್ನು ರೂಢಿಸಿಕೊಳ್ಳುವ ಪ್ರತಿಜ್ಞೆ ಮಾಡೋಣ.

**ವಂದೇ ಮಾತರಂ...**

---

➢ ಪುಟ 4 ರಿಂದ..... ಕರ್ನಾಟಕದಲ್ಲಿ ಶಿಕ್ಷಣ

ಅಂದಿನ ಶಿಕ್ಷಣದಲ್ಲಿ ಪುರಾಣ, ಗಣಿತ, ಚಿತ್ರದ ಕೆಲಸ, ವಾಸ್ತುಶಿಲ್ಪ, ಮುಂತಾದ ವಿಷಯಗಳಲ್ಲಿ ತರಬೇತಿ ನೀಡಲಾಗುತ್ತಿತ್ತು. ಸಂಗೀತ ಹಾಗೂ ಲಲಿತಕಲೆಗಳನ್ನು ರಾಜ ವಂಶದವರು, ಶ್ರೀಮಂತರು, ಆಸಕ್ತಿಯಿಂದ ಕಲಿಯುತ್ತಿದ್ದರು. ಆ ಕಾಲದಲ್ಲಿ ಆಯುರ್ವೇದ, ಪಶುವೈದ್ಯ, ಗಣಿತಶಾಸ್ತ್ರಗಳು ಶ್ರೇಷ್ಠತೆಯ ಮಟ್ಟವನ್ನು ಮುಟ್ಟಿದ್ದವು. ಮಂಗರಾಜನು ಕ್ರಿ.ಶ 1360 'ಖಗೇಂದ್ರ ಮಣಿದರ್ಪಣ' ಎಂಬ ಗ್ರಂಥವನ್ನು ಬರೆದನು. ಇದರಲ್ಲಿ ಮನುಷ್ಯನ ನಾನಾ ಬಗೆಯ ರೋಗಗಳು ಹಾಗೂ ಅವುಗಳಿಗೆ ಚಿಕಿತ್ಸಾ ಪದ್ಧತಿಯನ್ನು ವಿವರಿಸಿದ್ದಾನೆ.

ಉಚ್ಚಮಟ್ಟದ ವಿದ್ವತ್ತನ್ನು ಪಡೆಯಲು ದೂರ ದೇಶಗಳಿಂದ ವಿದ್ಯಾರ್ಥಿಗಳು ಕರ್ನಾಟಕಕ್ಕೆ ಬರುತ್ತಿದ್ದರು. ಬನವಾಸಿಯ ರಾಜಧಾನಿ 'ಬಳ್ಳಿಗಾಂವೆ'ಯಲ್ಲಿ ಮೂರು ಪುರಿಗಳು, ಏಳು ಬ್ರಹ್ಮಪುರಿಗಳು, ವಿಷ್ಣು, ಶಿವ, ಬ್ರಹ್ಮ, ಬುದ್ಧರಿಗೆ ಅರ್ಪಿಸಿದ ಐದು ಮೂಲ ಮಠಗಳು ಜೈನಬಸದಿ ಹಾಗೂ ಬೌದ್ಧ ವಿಹಾರದ ಜೊತೆಗೆ ಅನೇಕ ದೇವಾಲಯಗಳಿದ್ದವು. 'ಕೋಡಿಯ ಮಠ'ವು ಅವುಗಳಲ್ಲಿ ಪ್ರಖ್ಯಾತಿ ಹೊಂದಿತ್ತು. ವೀರಬಲ್ಲಾಳನ ಮಂತ್ರಿಯಾಗಿದ್ದ 'ಚಂದ್ರಮೌಳಿ' ಹಾಗೂ ಒಂದನೆಯ ನರಸಿಂಹನ ಕಾಲದ 'ನ್ಯಾಯಮೂರ್ತಿ' ಎಂಬುವವರು ಆ ಕಾಲದಲ್ಲಿ ವ್ಯಾಕರಣ, ತರ್ಕ, ಕಾವ್ಯ, ನಾಟಕ ಮುಂತಾದವುಗಳಲ್ಲಿ ಚತುರರಾಗಿದ್ದರೆಂದು ಕ್ರಿ.ಶ. 1182ರ ಶಾಸನವು ತಿಳಿಸುತ್ತದೆ. ಹೀಗೆ ಕರ್ನಾಟಕವು ಪ್ರಾಚೀನ ಕಾಲದಿಂದಲೂ ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಮುಂಚೂಣಿಯಲ್ಲಿತ್ತು ಎಂದು ತಿಳಿದುಬರುತ್ತದೆ. ಇದು ನಮ್ಮೆಲ್ಲರಿಗೂ ಹೆಮ್ಮೆಯ ಸಂಗತಿಯಾಗಿದೆ. •

---

## ವಿದ್ಯಾರ್ಥಿ ಮಿತ್ರ 27 ರ ಉತ್ತರ

**ಎಡದಿಂದ ಬಲಕ್ಕೆ :** 1. ಕನಿಕರ ; 3. ಮಂದಾನಿಲ ; 5. ಗೀಜುಗ ; 6. ಜಗನ್ಮಾತೆ ; 8. ರುಜುವಾತು ; 10. ಸ್ವಯಂವರ ; 12. ಕುಂಟುನೆಪ ; 14. ಕರಂಡ ; 16. ನಿರ್ವಿಕಾರ

**ಮೇಲಿನಿಂದ ಕೆಳಕ್ಕೆ :** 1. ಕರಬೂಜ ; 2. ರಮ್ಯಗೀತೆ ; 3. ಮಂಗಳೂರು ; 4. ಲಲ್ಲೆಮಾತು ; 7. ಗಡವ ; 9. ಜುಲ್ಮಾನೆ ; 10. ಸ್ವರಾಂಜಲಿ ; 11. ರತ್ನಾಕರ ; 12. ಕುಂಡಲಿನಿ ; 13. ಪರಿಕರ

ಜಗತ್ತು ಅತ್ಯುತ್ತಮ ಪುಸ್ತಕ.

# 2016–19ರ ವರೆಗಿನ ಧಾರವಾಡ ಜಿಲ್ಲಾ ಕಾರ್ಯಕಾರಿಣಿ

ಗೌರವಾಧ್ಯಕ್ಷರು – ಶ್ರೀ ಪುಂಡಲೀಕ ಕವಳಿಕಟ್ಟಿ ; ಅಧ್ಯಕ್ಷರು – ಶ್ರೀ ಶ್ರೀಧರ ಪಾಟೀಲಕುಲಕರ್ಣಿ
ಪ್ರಧಾನ ಕಾರ್ಯದರ್ಶಿ – ಶ್ರೀ ಬಸವರಾಜ ದೇವರಮನಿ ; ಸಂಘಟನಾ ಕಾರ್ಯದರ್ಶಿ – ಶ್ರೀ ಶಿವಾನಂದ ನಾಗೂರ
ಜಿಲ್ಲಾ ಮಹಿಳಾ ಪ್ರಮುಖ – ಶ್ರೀಮತಿ ಅಶ್ವಿನಿ ಸಾವಕಾರ ; ಖಜಾಂಚಿ – ಶ್ರೀ ರವಿಚಂದ್ರ ಕೊಣ್ಣೂರ
ಉಪಾಧ್ಯಕ್ಷರು – ಶ್ರೀ ಸಂಜೀವ ಭೂಶೆಟ್ಟಿ, ಶ್ರೀ ಅಶೋಕ ಜೋಶಿ, ಶ್ರೀ ಎಮ್.ಎಸ್.ತಿರ್ಲಾಪೂರ, ಶ್ರೀ ಎಮ್.ಕೆ.ಪಾಟೀಲ
ಕಾರ್ಯದರ್ಶಿಗಳು – ಶ್ರೀ ಲಿಂಗರಾಜ ಅರ್ಕಸಾಲಿ, ಶ್ರೀ ಪ್ರಕಾಶ ಅಂಗಡಿ, ಶ್ರೀಮತಿ ಪೂರ್ಣಿಮಾ ಮುಕ್ಕುಂದಿ
ಕಾರ್ಯಕಾರಿಣಿ – ಶ್ರೀ ಗಿರೀಶ ಭಂಡಾರಿ, ಶ್ರೀ ಚಂದ್ರು ಪಾಟೀಲ, ಶ್ರೀಮತಿ ಲಲಿತಾ ದೇವನಾಳ, ಶ್ರೀ ಲೋಹಿತ ಸಜ್ಜನ, ಶ್ರೀ ಸೋಮಶೇಖರ, ಶ್ರೀ ಜೆ.ಎಸ್.ಪಾಟೀಲ

## ವಿದ್ಯಾರ್ಥಿ ಮಿತ್ರ – 27




– ಎ. ರಾಜ, ಅಧ್ಯಾಪಕರು,
ನ್ಯಾಷನಲ್ ಹೈಸ್ಕೂಲ್, ಬೆಂಗಳೂರು

## ಪದಬಂಧ

**ಎಡದಿಂದ ಬಲಕ್ಕೆ**

1. ಕರುಣೆಯನ್ನು ತೋರಿದವನ ಗುಣ (4)
3. ನಿಧಾನವಾಗಿ ಬೀಸಿದ ಗಾಳಿ (4)
5. ಜಗವೆ ಮೆಚ್ಚುವ ಗೂಡ ಕಟ್ಟುವ ಪಕ್ಷಿ (3)
6. ಇವರು ವಿಶ್ವಕ್ಕೆ ತಾಯಿ (4)
8. ಸಾಕ್ಷಿ ಹೇಳಿದ್ದು ನಿಜವಾಗಿದೆ (4)
10. ರಾಜಕುಮಾರಿಯ ವರನನ್ನು ಆರಿಸಿಕೊಳ್ಳುವ ಸಮಾರಂಭ (4)
12. ಸುಳ್ಳು ಹೇಳುವಾಗ ಹೆಳವನ ಕಾರಣ ನೀಡುತ್ತಾರೆ (4)
14. ಕೈಯಲ್ಲಿರುವ ಅಂಡವನ್ನು ಭರಣಿಗೆ ಹಾಕಲಾಗಿದೆ (3)
16. ಈ ಆಕಾರದಲ್ಲಿ ವಿಕಾರವಿಲ್ಲ

**ಮೇಲಿನಿಂದ ಕೆಳಕ್ಕೆ**

1. ಬೂಜು ಹಿಡಿಯದ ಕರದಲ್ಲಿರುವ ಹಣ್ಣು (4)
2. ಈ ಗೀತೆಯು ಸುಂದರ,ರಮಣೀಯವಾಗಿದೆ (4)
3. ಈ ಬಂದರು ಮಂಗಳಕರವಾಗಿದೆ (3)
4. ನಲ್ಲೆ ಸರಸ ಸಲ್ಲಾಪದಿಂದ ಹೇಳಿದ ನುಡಿ (4)
7. ಗಡದ್ದಾಗಿ ತಿನ್ನುವ ಕೋತಿ (3)
9. ಮನೆಯಲ್ಲಿ ಜೂಲುನಾಯಿ ಮಾಡಿದ ತಪ್ಪಿಗೆ ತೆತ್ತ ದಂಡ (3)
11. ಸಮುದ್ರವು ಮುತ್ತುರತ್ನಗಳ ಆಗರ (4)
12. ಇದು ಹೋಮಕುಂಡವಲ್ಲ ಯೋಗದ ಒಂದು ವಿಧ (3)
13. ಕರದಿಂದ ಹಲವು ರೀತಿಯ ವಸ್ತು ತರಲಾಯಿತು (4)

| | | | | | | | | | |
|---|---|---|---|---|---|---|---|---|---|
| ■ | 1 | | | 2 | ■ | ■ | ■ | ■ | ■ |
| ■ | | ■ | ■ | | ■ | 3 | | | 4 |
| ■ | | ■ | ■ | 5 | | | ■ | ■ | |
| ■ | 6 | 7 | | | ■ | | ■ | | |
| ■ | ■ | | ■ | ■ | ■ | 8 | 9 | | |
| 10 | | | 11 | ■ | ■ | ■ | | ■ | ■ |
| | ■ | ■ | | ■ | 12 | | | 13 | ■ |
| | ■ | ■ | 14 | | | ■ | ■ | | ■ |
| 15 | | | | ■ | | ■ | ■ | | ■ |
| ■ | ■ | ■ | ■ | ■ | 16 | | | | |

ಮನಸ್ಸೆಂಬುದು ಮಧಿಸಿದ ಆನೆಯಂತೆ. ಗಾಳಿ ಬಂದ ಕಡೆಗೆ ಅದು ಧಾವಿಸಿ ನುಗ್ಗುತ್ತದೆ. ಆದ್ದರಿಂದ ಸತ್, ಅಸತ್ ಇವುಗಳ ವಿಚಾರ ಮಾಡಿ ಎಲ್ಲವನ್ನೂ ತಿಳಿದುಕೊಳ್ಳಬೇಕು. ಭಗವಂತನಿಗೋಸ್ಕರ ಕಠಿಣ ಸಾಧನೆ ಮಾಡಬೇಕು.

ಶ್ರೀಮಾತೆ ಶಾರದಾದೇವಿ

ಶಿಷ್ಯನಲ್ಲಿ ಇರಬೇಕಾದ ಮುಖ್ಯ ಲಕ್ಷಣ ಶುದ್ಧ ಮನಸ್ಸು, ನಿಜವಾದ ಜ್ಞಾನಾಕಾಂಕ್ಷೆ ಮತ್ತು ಸತತ ಪ್ರಯತ್ನ.
ಎದ್ದು ನಿಲ್ಲಿ ! ಧೀರರಾಗಿ ! ಬಲಾಢ್ಯರಾಗಿ ! ಜವಾಬ್ದಾರಿಯನ್ನೆಲ್ಲ ನೀವೂ ವಹಿಸಿ. ನಿಮ್ಮ ಅದೃಷ್ಟಕ್ಕೆ ನೀವೇ ಹೊಣೆ ಎಂದು ತಿಳಿದುಕೊಳ್ಳಿ. ನಿಮಗೆ ಬೇಕಾದ ಶಕ್ತಿ, ಸಹಾಯವೆಲ್ಲಾ ನಿಮ್ಮಲ್ಲೇ ಇದೆ !

– ಸ್ವಾಮಿ ವಿವೇಕಾನಂದ

ಹೆಜ್ಜೆ ಗುರುತು

# ಆದರ್ಶ ಶಿಕ್ಷಕ– ಎಂ.ಆರ್. ಶ್ರೀ



ಪ್ರತೀ ವರ್ಷದಂತೆ ಈ ವರ್ಷವೂ ಸೆಪ್ಟಂಬರ್ 5 ಬಂದು ಹೋಯಿತು. ಆದರೆ ಈ ವರ್ಷದ ವಿಶೇಷವೆಂದರೆ ಅಂದೇ ವಿದ್ಯಾರಂಭ ದೇವ ಗಣೇಶನೂ ಬಂದದ್ದು. ಸೆಪ್ಟಂಬರ್ 5 ಶಿಕ್ಷಕ ದಿನಾಚರಣೆ. ಅಂದು ರಾಜ್ಯ– ರಾಷ್ಟ್ರ ಸರ್ಕಾರಗಳು ಶಿಕ್ಷಕರನ್ನು ಗುರುತಿಸಿ ಅವರಿಗೆ ಪ್ರಶಸ್ತಿಯನ್ನು ಕೊಡುತ್ತದೆ. ಈವರೆಗೆ ಸಾವಿರಾರು ಶಿಕ್ಷಕರು ಪ್ರಶಸ್ತಿಗಳನ್ನು ಪಡೆದಿರಬಹುದು. ಅವರಲ್ಲಿ ಅನೇಕರು ವಿಶೇಷ ಸಾಧನೆಗಳನ್ನೂ ಮಾಡಿರಬಹುದು. ಆದರೆ ಪ್ರಶಸ್ತಿ ಪಡೆದ ಬಹುಮಂದಿ ಕಾಲನ ಹಾದಿಯಲ್ಲಿ ತಮ್ಮ ಹೆಜ್ಜೆ ಗುರುತುಗಳನ್ನು ಮೂಡಿಸಿರಲಿಕ್ಕಿಲ್ಲ.

ಎಲೆಮರೆಯ ಕಾಯಂತೆ ಸಂದುಹೋದ ಅನೇಕ ಶಿಕ್ಷಕರು, ಯಾವುದೇ ಪ್ರಶಸ್ತಿ ಪುರಸ್ಕಾರಗಳಿಗೆ ಆಶಿಸದೆ ತಮ್ಮ ಕರ್ತವ್ಯವನ್ನು ಮಾಡಿ ಶಿಷ್ಯಮಾನಸದಲ್ಲಷ್ಟೇ ಅಲ್ಲ ಜನಮಾನಸದಲ್ಲೂ ಶಾಶ್ವತ ಸ್ಥಾನವನ್ನು ಪಡೆದಿದ್ದಾರೆ. ಅಂತಹಾ ಒಬ್ಬಿಬ್ಬ ಪ್ರಾತಃಸ್ಮರಣೀಯ ಶಿಕ್ಷಕರ ಪರಿಚಯ ಮಾಡಿಕೊಳ್ಳುತ್ತ ಅವರಿಂದ ಪ್ರೇರಣೆ ಪಡೆದು, ಅವರು ನಡೆದ ಹಾದಿಯಲ್ಲಿ ನಾವೂ ನಾಲ್ಕೈದು ಹೆಜ್ಜೆ ಇಡುವ ಸಂಕಲ್ಪ ಮಾಡಿದರೆ ನಮ್ಮ ಬಾಳಿಗೂ ಸಾರ್ಥಕತೆ ಬಂದೀತು.

ನಮ್ಮಲ್ಲಿ ಅನೇಕರು 'ರಂಗಣ್ಣನ ಕನಸಿನ ದಿನಗಳು' ಎಂಬ ಪುಸ್ತಕವನ್ನು ಓದಿರಬಹುದು. ಓದದ್ದಿದ್ದಲ್ಲಿ ಎಲ್ಲಾ ಶಿಕ್ಷಕರು ಅಗತ್ಯವಾಗಿ ಓದಲೇಬೇಕಾದ ಪುಸ್ತಕವದು. ಆ ಪುಸ್ತಕ ಡಿ.ವಿ.ಜಿ.ಯವರ ಮಾತಿನಲ್ಲಿ 'ರಂಗಣ್ಣನ ಕನಸಿನ ದಿನಗಳು ಆಧುನಿಕ ಸಾಹಿತ್ಯದ ಜೀವಂತ ಗ್ರಂಥಗಳಲ್ಲೊಂದು. ನಮ್ಮ ದೇಶದಲ್ಲಿ ವಿದ್ಯಾಭ್ಯಾಸ ಕ್ರಮವನ್ನು ಆವಿಷ್ಕಾರ ಪಡಿಸಬೇಕೆಂದು ಈಚೆಗೆ ಉದಾಹರಣೆ ಎತ್ತಿರುವ ಜನದ ಪೈಕಿ ಎಷ್ಟು ಮಂದಿ ಆ ಗ್ರಂಥವನ್ನು ಚೆನ್ನಾಗಿ ಓದಿದ್ದಾರೋ? ಅವರು ಅದನ್ನು ಓದಿ ಅದರ ಭಾವನ್ನು ಗ್ರಹಿಸಿದ್ದಿದ್ದರೆ ಅವರ ಕಾರ್ಯ ಮಾರ್ಗ ಬೇರೆಯದಾಗಿರುತ್ತಿತ್ತು.'

ಈ ಪುಸ್ತಕವನ್ನು ಇದರೊಟ್ಟಿಗೆ 1928 ರ ಸುಮಾರಿನಲ್ಲಿ ತಮ್ಮ ಸಾಹಿತಿ ಮಿತ್ರರಾದ ಡಿ.ವಿ ಗುಂಡಪ್ಪ, ಪ್ರೊ॥ ಶ್ರೀ ವೆಂಕಣ್ಣಯ್ಯ, ಪ್ರೊ॥ ವಿ.ಸೀ ಮೊದಲಾದವರೊಡನೆ ಹಾಳುಹಂಪಿಯನ್ನು ನೋಡಿ ಬಂದು ತಮ್ಮ ಮನಸ್ಸಿನಲ್ಲುಂಟಾದ ಭಾವನಾ ವಿಶೇಷಕ್ಕೆ ಶಬ್ದರೂಪ ನೀಡಿದಾಗ ಮೂಡಿದುದು 'ನಾಗರೀಕ' ನಾಟಕ.

ಇವೆರಡರ ಕರ್ತೃ ಎಂ.ಆರ್. ಶ್ರೀನಿವಾಸ ಮೂರ್ತಿ. ಎಂ.ಆರ್ ಶ್ರೀಯವರು ಆಗಸ್ಟ್ 28, 1892 ರಲ್ಲಿ ರಾಮಚಂದ್ರ ರಾವ್ ಮತ್ತು ಸಾವಿತ್ರಮ್ಮ ದಂಪತಿಗಳ ಎರಡನೆಯ ಮಗನಾಗಿ ಜನಿಸಿದರು. ತಮ್ಮ ಪ್ರೌಢಶಾಲಾ ಶಿಕ್ಷಣವನ್ನು ಬೆಂಗಳೂರಿನ ಸೆಂಟ್ರಲ್ ಕಾಲೇಜು ಆವರಣದಲ್ಲಿ ಮುಗಿಸಿ ಬಿ.ಎ ವ್ಯಾಸಂಗವನ್ನು ಅದೇ ಸೆಂಟ್ರಲ್ ಕಾಲೇಜಿನಲ್ಲೇ ಮುಗಿಸಿ 1916ರಲ್ಲಿ ಶಿಕ್ಷಕ ವೃತ್ತಿಗೆ ಕಾಲಿರಿಸಿದರು. ಶಿವಮೊಗ್ಗ ಪ್ರೌಢಶಾಲೆಯಲ್ಲಿ 3 ತಿಂಗಳು ತಾತ್ಕಾಲಿಕ ಉಪಾಧ್ಯಾಯರಾಗಿದ್ದು ನಂತರ ತೀರ್ಥಹಳ್ಳಿಯ ಕನ್ನಡ ಹೈಸ್ಕೂಲ್ ಮುಖ್ಯೋಪಾಧ್ಯಾಯರಾಗಿ ನಿಯುಕ್ತಗೊಂಡರು. ನಂತರ ನಾರ್ಮಲ್ ಸ್ಕೂಲ್‌ಗಳ ಮುಖ್ಯ ಶಿಕ್ಷಕರಾಗಿ ಇನ್ಸಪೆಕ್ಟರ್ ಆಗಿ, ಜಿಲ್ಲಾ ವಿದ್ಯಾಧಿಕಾರಿಗಳಾಗಿ ತಮ್ಮ ದಕ್ಷ ಸೇವೆಯನ್ನು ಸಲ್ಲಿಸಿದರು.

ಶ್ರೀನಿವಾಸಮೂರ್ತಿಗಳು ಶಿಷ್ಯಚಿತ್ತಾಪಹಾರಕರು. ಅವರ ಸಾವಿರಾರು ಶಿಷ್ಯರಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿದ್ದ ನಿಟ್ಟೂರು ಶ್ರೀನಿವಾಸರಾಯರೂ ಓರ್ವರು. ಅವರ ಕೈ ಕೆಳಗೆ ಕಲಿತ ಯಾವ ವಿದ್ಯಾರ್ಥಿಯನ್ನೂ ಅವರು ಮರೆತವರಲ್ಲ. ಅದರಲ್ಲೂ ಅವನಲ್ಲಿ ಯಾವುದಾದರೂ ಪ್ರತಿಭೆ ಇದೆ, ಅವನು ಬುದ್ಧಿಶಾಲಿ ಎಂದು ತಿಳಿದುಬಿಟ್ಟರೆ ಅವನಲ್ಲಿ ತುಂಬ ವಿಶ್ವಾಸ. ಇವರು ಬರೆದಿದ್ದ ನಾಟಕಕ್ಕೆ ಮೈಸೂರು ಮಹಾರಾಜರಿಂದ ಪುರಸ್ಕಾರ ಸಿಕ್ಕಿತು. 150 ರೂ. ಗಳ ಬಹುಮಾನವೂ ಬಂತು. ಆಗ ಬೆಂಗಳೂರಿನಲ್ಲಿ ಓದುತ್ತಿದ್ದ ತಮ್ಮ ಶಿವಮೊಗ್ಗೆಯ ಶಿಷ್ಯರನ್ನೆಲ್ಲಾ ಕರೆದು ಮನೆಯಲ್ಲಿ ಲಾಡು ಊಟ ಮಾಡಿಸಿ ಲಾಲ್‌ಬಾಗ್‌ಗೆ ಕರೆದುಕೊಂಡು ಹೋಗಿ ಅವರೊಂದಿಗೆ ಫೋಟೋ ತೆಗೆಸಿಕೊಂಡಿದ್ದರು.

1933ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಆಶ್ರಯದಲ್ಲಿ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನ ಕೆಲಸ ಪ್ರಾರಂಭವಾಯ್ತು. ಅದಕ್ಕೆ ಪ್ರಧಾನ ಸಂಪಾದಕರು ಬೆಳ್ಳಾವೆ ವೆಂಕಟನಾರಣಪ್ಪನವರು. ಬೆಳ್ಳಾವೆಯವರಿಗೆ ಈ ಅಗಾಧ ಕೆಲಸ ನಿರ್ವಹಿಸಲು ಸಹಾಯಕರೊಬ್ಬರು ಬೇಕಾಗಿತ್ತು. ಆದರೆ ಅವರ ಮರ್ಜಿ ಹಿಡಿದು ಕೆಲಸ ಮಾಡುವುದು ತುಂಬಾ ಕಷ್ಟದ ಕೆಲಸ. ಬೆಳ್ಳಾವೆಯವರಷ್ಟೇ ಶ್ರದ್ಧೆ, ಆಸಕ್ತಿ, ಶಿಸ್ತಿನ ಮನುಷ್ಯನಾಗಬೇಕಿತ್ತು. ಸಮಯ ಪಾಲನೆಗೆ ವಿಶೇಷ ಮಹತ್ವ ಕೊಡುತ್ತಿದ್ದವರು ಬೆಳ್ಳಾವೆಯವರು ಈ ಕೆಲಸಕ್ಕೆ ಆಯ್ಕೆಯಾದವರು ಎಂ.ಆರ್ ಶ್ರೀಯವರು. 33ರಿಂದ 43ರ ವರೆಗೂ ಕೆಲಸ ನಡೆದರೂ ಬೆಳ್ಳಾವೆಯವರು 43ರಲ್ಲೇ ದೈವಾಧೀನರಾದರು. ಸಾಯುವ ಮುನ್ನವೂ ಅವರು ನಿಘಂಟು, ನಿಘಂಟು ಎಂದು ಕನವರಿಸಿಕೊಳ್ಳುತ್ತಿದ್ದರಂತೆ. ಹೀಗಾಗಿ ಅವರಿಗೆ ಯೋಗ್ಯ ಉತ್ತರಾಧಿಕಾರಿ ಎಂದರೆ ಎಂ.ಆರ್. ಶ್ರೀಯವರೇ ಸರಿ ಎಂದು ಸರ್ಕಾರ ಅವರನ್ನು ನಿಯುಕ್ತಿ ಮಾಡಿತು. ನಿಘಂಟಿನ ಕೆಲಸ ಪೂರ್ತಿಯಾಗುವವರೆಗೆ ಗುರುವಿನ ಆತ್ಮಕ್ಕೆ ಶಾಂತಿಸಿಗದೆಂದು ಭಾವಿಸಿದ ಮೂರ್ತಿಯವರು ಹಗಲು–ರಾತ್ರಿಯನ್ನು ಒಂದು ಮಾಡಿ ಮುಂದಿನ ಮೂರು ವರ್ಷಗಳಲ್ಲಿ ನಿಂಘಂಟಿನ ಕೆಲಸವನ್ನು ಪೂರ್ಣಗೊಳಿಸಿದರು.

40 ರ ದಶಕದಲ್ಲಿ ಪಠ್ಯಪುಸ್ತಕ ರಚನಾ ಸಮಿತಿಯ ಅಧ್ಯಕ್ಷರಾಗಿದ್ದವರು. ಕನ್ನಡದ ಕಣ್ವರೆಂದೇ ಖ್ಯಾತರಾಗಿದ್ದ ಬಿ.ಎಂ.ಶ್ರೀಯವರು ನಿಘಂಟಿನ ಜವಾಬ್ದಾರಿ ಇದ್ದಾಗಲೂ ಎಂ.ಆರ್.ಶ್ರೀಯವರು ಪಠ್ಯಪುಸ್ತಕ ಸಮಿತಿಯ ಸದಸ್ಯರಾಗಿ ಶ್ರದ್ಧೆಯಿಂದ ಕಾರ್ಯನಿರ್ವಹಿಸಿದ್ದರು. 1952ರಲ್ಲಿ ಸರ್ಕಾರ ಅವರನ್ನೇ ಪಠ್ಯ ಪುಸ್ತಕ ಸಮಿತಿಗೆ ಅಧ್ಯಕ್ಷರನ್ನಾಗಿ ನೇಮಿಸಿತು.

ಮಾತೃಭಾಷೆಯಾದ ಕನ್ನಡದ ಮೂಲಕವೇ ಮಕ್ಕಳಿಗೆ ಪಾಠ ಕಲಿಸಬೇಕು. ವೈಜ್ಞಾನಿಕ ವಿಷಯಗಳಿಗೂ ಕನ್ನಡದಲ್ಲಿ ಸಮರ್ಥ ಗ್ರಂಥ ರಚನೆಯಾಬೇಕು ಎಂಬುದು ಮೂರ್ತಿಗಳ ಅಭಿಪ್ರಾಯ. ಆದ್ದರಿಂದಲೇ ಭೌತಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಅವರು 1925ಕ್ಕೂ ಮುನ್ನವೇ ಭೌತಶಾಸ್ತ್ರದ ಮೂರು ಪುಸ್ತಕಗಳನ್ನು ಬರೆದಿದ್ದರು. ನಮ್ಮ ದುರಾದೃಷ್ಟ ಅದು ಪ್ರಕಟವೂ ಆಗಲಿಲ್ಲ. ಈಗ ಅದರ ಹಸ್ತ ಪ್ರತಿಯು ಲಭ್ಯವಿಲ್ಲ.

ವಿದ್ಯಾ ಇಲಾಖೆಯಿಂದ ನಿವೃತ್ತರಾದರೂ ಅಧ್ಯಾಪನದ ತಮ್ಮ ಪ್ರವೃತ್ತಿಯನ್ನು ಅವರು ಬಿಡಲಿಲ್ಲ. 1949–50ರಲ್ಲಿ ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ಗೌರವ ಅಧ್ಯಾಪಕರಾಗಿ ಕನ್ನಡ ಸಾಹಿತ್ಯ ಬೋಧನೆಯನ್ನು ಉಚಿತವಾಗಿ ಮಾಡಿ ಆತ್ಮತೃಪ್ತಿಯನ್ನು ಪಡೆದರು. ನಂತರ 1950 ಫೆಬ್ರವರಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪದವಿಯ ಜವಾಬ್ದಾರಿ ಇವರ ಹೆಗಲೇರಿತು. ಇವರು ಅಧ್ಯಕ್ಷರಾದ ನಂತರ ಪರಿಷತ್ತಿನ ಚೈತನ್ಯ ದ್ವಿಗುಣಗೊಂಡಿತು. ಆರ್ಥಿಕ ಸ್ಥಿತಿ ಸುಧಾರಿಸಿತು. ಗಮಕ ಕಲೆಗೆ ಪ್ರೋತ್ಸಾಹ ಸಿಕ್ಕಿತು. ಹೊರನಾಡಿನಲ್ಲಿ ಕನ್ನಡ ಸಂಸ್ಥೆ ಕಟ್ಟಲು ಪ್ರೋತ್ಸಾಹಿಸಿದರು. ಇವರು ಕಾರ್ಯದಕ್ಷತೆ ಮೆಚ್ಚಿದ ಜನ 1953ರ ಮೇ ನಲ್ಲಿ ಮತ್ತೆ ಇವರನ್ನು ಅಧ್ಯಕ್ಷರನ್ನಾಗಿ ಚುನಾಯಿಸಿತು. ಆಗ ಅವರ ವೈಯುಕ್ತಿಕ ಆರ್ಥಿಕ ಪರಿಸ್ಥಿತಿ ಹದಗೆಟ್ಟಿತ್ತು. ಬರುವ 108 ರೂ. ಪಿಂಚಣಿಯಲ್ಲಿ ಸಂಸಾರ ತೂಗಿಸಬೇಕಿತ್ತು. ಆದರೆ ತಾವು ಸ್ವೀಕರಿಸಿದ ಜವಾಬ್ದಾರಿಯನ್ನು ನಿಸ್ಪಹತೆಯಿಂದ ನಿರ್ವಹಿಸಿದರು. ಸಾಮಾಜಿಕ ಕೆಲಸದ ಮುಂದೆ ತಮ್ಮ ಸ್ವಂತದ ಕಷ್ಟಗಳು ಗೌಣವೆಂದು ಭಾವಿಸಿದ ಮಹಾನ್ ವ್ಯಕ್ತಿ ಎಂ.ಆರ್.ಶ್ರೀಯವರು. ಪರಿಷತ್ತಿನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಲೇ 18–8–1953ರಂದು ವಿಧಿವಶರಾದರು. ಪರಿಷತ್ತಿನ ಜವಾಬ್ದಾರಿಯಿಂದ ಮೂರ್ತಿಯವರು ನಿವೃತ್ತಿಯಾದುದ್ದು ಹೀಗೆ.

ಮೂರ್ತಿಯವರ ನಿಧನದ ನಂತರ ಡಿ.ವಿ.ಜಿಯವರು ಅವರ ಬಗ್ಗೆ ಹೀಗೆ ಬರೆದಿದ್ದರು. 'ಮೂರ್ತಿಗಳು ಪರಮ ಸಾತ್ವಿಕರು, ಅಂತರಂಗ ಭಕ್ತರು, ಮಾತಾಪಿತೃ ಪೂಜಕರು, ಗುರುಹಿರಿಯರಲ್ಲಿ ನಮ್ರರು, ನೀತಿ ಪ್ರಸಂಗಗಳಲ್ಲಿ ತತ್ವೈಕನಿಷ್ಟರು, ಲೌಕಿಕ ಕರ್ತವ್ಯಗಳಲ್ಲಿ ದಕ್ಷರು ಮತ್ತು ನಿಸ್ಪೃಹರು, ಅವರನ್ನು ಬಲ್ಲವರು ಯಾರೂ ಅವರ ಅಗಲಿಕೆಯಿಂದ ಎದೆ ನೋವು ಪಡದೆ ಇರರು. ಅವರ ಮರಣದಿಂದ ನಮ್ಮ ಸಾಹಿತ್ಯ ಪ್ರಪಂಚದಲ್ಲಿ ಹೇಗೋ ನಮ್ಮ ಸಾಧುಸಜ್ಜನ ಪ್ರಪಂಚದಲ್ಲಿಯೂ ಹಾಗೇ. ಇಂದು ನಾವು ಮತ್ತಷ್ಟು ಬಡವರಾಗಿದ್ದೇವೆ.



ಹೆಚ್. ನಾಗಭೂಷಣ ರಾವ್
ನಿವೃತ್ತ ಅಧ್ಯಾಪಕ
ನ್ಯಾಷನಲ್ ಹೈಸ್ಕೂಲ್
ಬೆಂಗಳೂರು

Registered No. RNI 45459/85 RNP/KA/BGS-125/2015-2017 Posted at Bangalore PSO Bangalore -560 026
Date of Posting 20th or 21st of every month

# ಚಿತ್ರ ಸುದ್ದಿ



ಕ ರಾ ಮಾ ಶಿಕ್ಷಕ ಸಂಘ ಜೇವರ್ಗಿ ತಾಲ್ಲೂಕ ಘಟಕದ ಎಲ್ಲಾ ಪದಾಧಿಕಾರಿಗಳು ಅಂಬೇಡ್ಕರ್ ಶಾಲೆಯಲ್ಲಿ ಸಭೆ ಸೇರಿ ದಿನಾಂಕ 15/08/2016 ರಿಂದ 31/08/2016 ನಡೆಯುವ ಪತ್ರ ಚಳವಳಿಗೆ ಬೆಂಬಲಿಸಿ ಸಚಿವರಿಗೆ ಪತ್ರ ಬರೆಯುವ ಮೂಲಕ ಚಾಲನೆ ನೀಡಿದರು ಎಲ್ಲಾ ಶಿಕ್ಷಕರು ಭಾಗವಹಿಸಲು ಕರೆ ನೀಡಿದರು



ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಬಾಗಲಕೋಟೆ ಘಟಕದ ಎಲ್ಲಾ ಪದಾಧಿಕಾರಿಗಳು ಪತ್ರ ಚಳವಳಿಗೆ ಬೆಂಬಲಿಸಿ ಸಚಿವರಿಗೆ ಪತ್ರ ಬರೆಯುವ ಮೂಲಕ ಪತ್ರ ಚಳವಳಿಗೆ ಚಾಲನೆ ನೀಡಿದರು.



ಶಹಾಪುರದಲ್ಲಿ ನಡೆದ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಯಾದಗಿರಿ ಜಿಲ್ಲಾ ಘಟಕದ ಸಭೆ ನಡೆಯಿತು. ಜಿಲ್ಲಾ ಘಟಕದ 2016–19 ನೇ ಸಾಲಿನ ಪುನಾರಚನೆಯಾಯಿತು.



13–9–2016 ರ ಮಂಗಳವಾರ ವಿಜಯನಗರ ಪಿ.ಯು. ಕಾಲೇಜ್, ವಿದ್ಯಾನಗರ, ಹುಬ್ಬಳ್ಳಿಯಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಧಾರವಾಡ ಜಿಲ್ಲಾ ಘಟಕದ ವತಿಯಿಂದ ಶಿಕ್ಷಕರ / ಉಪನ್ಯಾಸಕರ ಸಮಸ್ಯೆಗಳ ಕುರಿತು ಸಭೆ ನಡೆಯಿತು.

IF UNDELIVERED
PLEASE RETURN TO SENDER

Published for K.S.S.T.A. by K. Narahari
# 55, Yadavasmruthi, 1st Main, Sheshadripuram
Bangalore-560020. ✆ : 060-23466495
Printed at : RASHTROTTHANA MUDRANALAYA
Bangalore - 560 019.

**ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ**

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20–6–1980ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (I.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲು ನಿಧಿಯಿಂದ 'ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ' ಚಂದಾ ಪಾವತಿ ಮಾಡಬಹುದು

srushtidesigns@gmail.com